
ಕಲ್ಯಾಣ ಕಿರಣ

ಅಕ್ಟೋಬರ್ -2006

ಬೆಲೆ - 6/-





ಧಾರವಾಡದಲ್ಲಿ ದಿ. 02 -10- 2006 ರಂದು ನಡೆದ ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮದ ನಿಮಿತ್ತ ನಡೆದ ಪಥಸಂಚಲನದಲ್ಲಿ ಶರಣರನ್ನು ಉದ್ದೇಶಿಸಿ ಮಾತನಾಡುತ್ತಿರುವ ಪೂಜ್ಯ ಮಾತಾಜಿಯವರು



ಬೆಂಗಳೂರಿನ ಬಸವ ಮಂಟಪದಲ್ಲಿ ದಿ.02 -10- 2006ರಂದು ನಡೆದ ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ , ಪೂಜ್ಯ ಬಸವಕುಮಾರ ಸ್ವಾಮೀಜಿ, ಮತ್ತು ಅತಿಥಿಗಳು

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-37	ಬಸವ ಶಕೆ-873	ಆಜೀವ ಸದಸ್ಯತ್ವ 600 ರೂ.
ಸಂಚಿಕೆ-6	ಅಕ್ಟೋಬರ್-2006	ವಾರ್ಷಿಕ ಚಂದಾ 60/- ರೂ.

ವೀರ ಮಾತೆ ಅಕ್ಕನಾಗಲಾಂಬಿಕಾ ತಾಯಿಗೆ ನುಡಿ ನಮನ

ಜೈ ಮಾತೆ ವೀರ ಮಾತೆ
ಅಕ್ಕನಾಗಲಾಂಬಿಕಾ ಜೈ ಜೈ || ಪಲ್ಲವಿ ||

ಮಾದರಸ ಮಾದಲಾಂಬಿಕೆ ಪುತ್ರಿಯಾಗಿ
ಯುಗ ಪುರುಷ ಬಸವಣ್ಣನ ಸೋದರಿಯಾಗಿ
ಸಂಗಮದ ಶಿವಸ್ವಾಮಿಯ ಪತ್ನಿಯಾಗಿ
ಚನ್ನ ಬಸವಣ್ಣನ ಜನ್ಮ ದಾತೆಯಾದೆ ||ಜೈ ಮಾತೆ||

ಮನುಕುಲದ ಜ್ಯೋತಿ ಗುರು ಬಸವಣ್ಣನ
ಆದರ್ಶಗಳಿಗೆ ಸ್ಫೂರ್ತಿಯ ನೀಡಿ
ಕ್ರಾಂತಿ ಬೀಜವ ಬಿತ್ತಿ ಕ್ರಾಂತಿ ಪುರುಷನ ಮಾಡಿ
ಕ್ರಾಂತಿ ಗಂಗೋತ್ರಿ ನೀನಾದೆ ತಾಯೆ ||ಜೈ ಮಾತೆ||

ಅನುಭವ ಮಂಟಪದ ಮಹಾತಾಯಿ ನೀನಾದೆ
ಸರ್ವ ಶರಣರಿಗೂ ಮಾರ್ಗದರ್ಶಕಳಾದೆ
ಅಪ್ಪ ಬಸವಣ್ಣನ ಆದರ್ಶ ಪಾಲಿಸಿ
ಬಸವ ಮಹಾಮನೆಯ ಮಾಣಿಕ್ಯವಾದೆ || ಜೈ ಮಾತೆ||

ಹೆಣ್ಣು ಶೂದ್ರಳು ಎಂಬ ಜನ್ಮ ಹೀನತೆ ತೊಡೆದು
ಅಪ್ಪ ಬಸವಣ್ಣನ ಹಾಡಿ ಕೊಂಡಾಡಿ
ವೈಚಾರಿಕ ಹೋರಾಟಗಾರ್ತಿಯಾಗಿ
ಸ್ತ್ರೀ ಕುಲದ ಹಿರಿಮೆಯ ಹೆಚ್ಚಿಸಿದ ಮಾತೆ || ಜೈ ಮಾತೆ||

ಅಂದು ಕಲ್ಯಾಣವು ಕ್ರಾಂತಿ ಕಣವಾಗಲು
ವಚನ ವಾಙ್ಮಯಕೆ ನಾಶ ಭಯವು ಬರಲು
ವಚನ ನಿಧಿಯ ಹೊತ್ತು ಹೋರಾಟ ಮಾಡುತ್ತ
ಉಳವಿಯ ಕ್ಷೇತ್ರದಿ ಇಟ್ಟು ರಕ್ಷಿಸಿದೆ || ಜೈ ಮಾತೆ||

ಬಸವ ತತ್ತ್ವದ ಪ್ರಚಾರ ಗೈಯುತ
ನುಲಿಯ ಚಂದಯ್ಯ ಶರಣರೊಡಗೂಡಿ
ತರೀಕೆರೆ ಸನಿಹದಿ ಕೆಲಕಾಲ ತಂಗಿದ್ದು
ಲಿಂಗೈಕ್ಯವಾದ ಪರಮ ಪಾವನ ಮೂರ್ತಿ || ಜೈ ಮಾತೆ||

ಶಾರದ ಬಸವರಾಜ್
ರಾ.ಬ.ದ.ಭದ್ರಾವತಿ

ಸಂಪುಟ 37　ಬಸವ ಶಕೆ 873　ಆಜೀವ ಸದಸ್ಯತ್ವ 600ರೂ
ಸಂಚಿಕೆ 6　ಅಕ್ಟೋಬರ್- 2006　ವಾರ್ಷಿಕ ಚಂದಾ 60/-ರೂ.

ಕಿರಣ ಗನ್ನಡಿ



ಚಿನ್ಮಯ ಜ್ಞಾನಿ ಚನ್ನ ಬಸವಣ್ಣನವರ ಜಯಂತಿ ಉತ್ಸವ

ದಿ. 23-10-2006,

ವಾರ :ಶಿವ (ಸೋಮ)ವಾರ

KALYANA KIRANA-Reg No.19988/70. Monthly Magazine Edited by Pujya Mate Kasturidevi and Published by Pujya Allama Prabhu Swamiji, on behalf of Vishwakalyana Mission Charitable Trust, Basava Mantapa, at Padmashri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ಸರ್ಕಾರ / ಪೋಲೀಸ್ ಇಲಾಖೆಗಳ ಹಾಸ್ಯಾಸ್ಪದ ಅಡೆತಡೆಗಳು

- ಮಾತಾಜಿ

"ಕಾನೂನು ಒಂದು ಕತ್ತೆ; ಅದು ಎತ್ತ ಬೇಕಾದರೂ ಒದೆಯ ಬಲ್ಲದು." ಎಂದು ಕೆಲವರು ಹೇಳುವುದುಂಟು. ಕಾನೂನು ಒಂದು ಕತ್ತೆಯೊ? ಅಥವಾ ಕಾನೂನು ಪಾಲಿಸುವೆವೆಂದು ಒದೆಯುವವರೋ ಎಂದು ಸಂದೇಹ ಏಳುತ್ತದೆ. ಜಗತ್ತಿನಲ್ಲಿ ಅಸಾಮಾನ್ಯವಾದ ಸಾಧನೆಗಳೆಲ್ಲವೂ ಸಾಮಾನ್ಯವಾದ ಕಾನೂನಿಗೆ ಮೀರಿದವೇ (ಉಲ್ಲಂಘಿಸುವುದಲ್ಲ) ಆಗಿರುತ್ತವೆ. ಅವುಗಳನ್ನು ವಿಶೇಷ ಕಾನೂನಿನ ಮೂಲಕ ಅಥವಾ ನಿಯಮಗಳ ಮೂಲಕ ಅಳೆಯಬೇಕು.

ನಾಲ್ಕು ವರ್ಷದ ಮಗು ಬುಧಿಯಾ ಸಿಂಗ್; ಒರಿಸ್ಸಾ ರಾಜ್ಯದವನು ಮಗುವಿದ್ದಾಗಲೇ ತಂದೆಯ ಸಾವು, ತಾಯಿ ಸುಕಾಂಕತಿ. ವಿಧವೆಯಾದ ಬಳಿಕ ಬದುಕಲು ದಾರಿ ಕಾಣದೆ ಎಂಟು ನೂರು ರೂಪಾಯಿಗೆ ಮಗುವನ್ನು ಮಾರಿದಳು. ಭುವನೇಶ್ವರದಲ್ಲಿ ಜೂಡೋ ಆಟದ ತರಬೇತಿದಾರರಾದ ಬಿರಂಚಿದಾಸ್ ಎನ್ನುವವರು ಆ ವ್ಯಾಪಾರಿಗೆ ದುಡ್ಡುಕೊಟ್ಟು, ಬುಧಿಯಾ ಸಿಂಗನನ್ನು ಆಶ್ರಯಕ್ಕೆ ತೆಗೆದುಕೊಂಡು ಸಾಕು ತಂದೆಯಾಗಿ ಬೆಳೆಸ ತೊಡಗಿದರು. ಪರಿಸರದ ಪ್ರಭಾವದಿಂದ ಬುಧಿಯಾ ಕೆಟ್ಟ ಮಾತುಗಳನ್ನು ಕಲಿತಾಗ ಒಮ್ಮೆ ಓಟದ ಶಿಕ್ಷೆ ವಿಧಿಸಿ ಬಿರಂಚಿದಾಸ್ ಹೊರಗೆ ಹೋದರು. 7 ಗಂಟೆಯ ನಂತರ ಬಂದರು. ಬಾಲಕ ಓಡುತ್ತಲೇ ಇದ್ದ. ಸಾಕು ತಂದೆಗೆ ಅಚ್ಚರಿಯಾಯಿತಲ್ಲದೆ, ಬಾಲಕನ ಅಗಾಧ ಪ್ರತಿಭೆಯ ದೈಹಿಕ ಶಕ್ತಿಯ ಅರಿವಾಯಿತು. ಓಟದ ತರಬೇತಿ ನೀಡಿದರು.

2006ರ ಮೇ 2 ರಂದು ಬುಧಿಯಾ ಪುರಿಯಿಂದ ಭುವನೇಶ್ವರದವರೆಗಿನ ದೂರ 65 ಕಿಲೋಮೀಟರನ್ನು 7 ತಾಸು-2 ನಿಮಿಷಗಳಲ್ಲಿ ಓಡಿ ಕ್ರಮಿಸಿದ. ಇದೊಂದು ವಿಶ್ವದಾಖಲೆ. ಎಲ್ಲರ ಗಮನ ಅವನ ಕಡೆ ಹರಿಯಿತು. ಸನ್ಮಾನ - ಪ್ರಶಂಸೆಗಳ ಸುರಿಮಳೆಯಾಯಿತು. ಸ್ವತಃ ಒರಿಸ್ಸಾ ಸರ್ಕಾರವೇ ಪ್ರೋತ್ಸಾಹಿಸಿತು. ಆದರೆ ಜೊತೆಗೇ ಟೀಕೆಗಳ ಸುರಿಮಳೆಯೂ ಶುರುವಾಯಿತು. ಶಿಶು ಕಲ್ಯಾಣ ಮಂಡಳಿಯವರು ಇದು ಕ್ರೂರ ಶಿಕ್ಷೆ, ಇದರಿಂದ ಮಗುವಿನ ಶರೀರಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಹಣದ (ಕೀರ್ತಿಯ) ಆಸೆಗಾಗಿ ಈ ರೀತಿ ಮಗುವನ್ನು ದಣಿಸುವ ಕ್ರೀಡಾ ಗುರು, ಸಾಕು ತಂದೆ ಬಿರಂಚಿದಾಸ್ ಶಿಕ್ಷಾರ್ಹರು ಎಂದು ಹುಯಿಲೆಬ್ಬಿಸಿ ಬುಧಿಯಾನ ಓಟಕ್ಕೆ ತಡೆ ಹಾಕುತ್ತಿದ್ದಾರೆ.

ಬೆಂಗಳೂರಿಗೆ ಪ್ರೆಸ್ ಕ್ಲಬ್ಬಿನವರು ಬಾಲಕನನ್ನು ಸನ್ಮಾನಿಸುವ ಮತ್ತು ಪ್ರಯೋಗಾರ್ಥ ಓಡಿಸುವ ಸಲುವಾಗಿ ಕಾರ್ಯಕ್ರಮ ಇಟ್ಟಾಗ ಪೋಲೀಸ್ ಇಲಾಖೆ ತಡೆ ತಂದಿತು. ನಿಜಕ್ಕೂ ನಮ್ಮ ದೇಶದಲ್ಲಿ ಎಂತೆಂತಹ ಮೂರ್ಖನಿಯಮಗಳಿವೆ ಎಂದು ಆಶ್ಚರ್ಯವೆನಿಸುತ್ತದೆ. ನಮ್ಮ ದೇಶದ ಬುದ್ಧಿವಂತ ಯುವಕನೊಬ್ಬ ಅಮೇರಿಕಾದಲ್ಲಿ 19 ವರ್ಷಕ್ಕೆ ವೈದ್ಯನಾಗಿ ಜಗತ್ತಿನಲ್ಲೇ ಕಿರಿಯ ವೈದ್ಯ ಎಂದು ದಾಖಲೆ ಬರೆದ. ಅಮೇರಿಕಾದಲ್ಲಿ 6 ವರ್ಷದ ಮಗುವು ಕಾರನ್ನು ಹೆದ್ದಾರಿಯ ಮೇಲೆ 150 ಕಿ.ಮೀಟರ್ ಓಡಿಸಿತು. ಮತ್ತೊಂದು 4 ವರ್ಷದ ಮಗು ನದಿಯಲ್ಲಿ ಈಜಿತು. ನಮ್ಮ ಇತಿಹಾಸದಲ್ಲಿ ಹೊಯ್ಸಳ ಬಾಲಕನಿದ್ದಾಗಲೇ ತರಗತಿಗೆ ನುಗ್ಗಿದ ಹುಲಿಯನ್ನು ಎದುರಿಸಿದ. ಇಂಥ ಸಾಧನೆಗಳನ್ನು ವಿಶೇಷವೆಂದು ಪಾಶ್ಚಿಮಾತ್ಯರು ಗಮನಿಸಿ ಗೌರವಿಸಿದರೆ ನಮ್ಮ ದೇಶದ ಪೋಲೀಸ್ ಇಲಾಖೆ ಮತ್ತು ಕೆಲವು ಸಂಸ್ಥೆಗಳ ಪ್ರತಿಕ್ರಿಯೆ ನೋಡಿರಿ. ನಮ್ಮ ದೇಶದಲ್ಲಿ ಪ್ರತಿಭಾವಂತರು ಮುಂದೆ ಬರಲಾರದಂತೆ

ಕೆಲವು ಸಂಸ್ಥೆಗಳ ಪ್ರತಿಕ್ರಿಯೆ ನೋಡಿರಿ. ನಮ್ಮ ದೇಶದಲ್ಲಿ ಪ್ರತಿಭಾವಂತರು ಮುಂದೆ ಬರಲಾರದಂತೆ ವಿಪರೀತ ಅಡೆ ತಡೆಗಳು ಇದರಿಂದಾಗಿ ಎಂತಹ ಎಂಟೆದೆಯವರೂ ಉತ್ಸಾಹ ಕಳೆದುಕೊಳ್ಳಬೇಕಾದ ವಾತಾವರಣವಿದೆ. ಪ್ರೋತ್ಸಾಹ ನೀಡುವುದಿರಲಿ ಅಡ್ಡಿ ಆತಂಕಗಳನ್ನು ಒಡ್ಡುವುದೇ ಬಹಳ.

ಎಷ್ಟೋ ಮಕ್ಕಳು ಪೌಷ್ಟಿಕ ಆಹಾರವಿಲ್ಲದೆ ಅಥವಾ ದುರ್ಘಟನೆಗಳಲ್ಲಿ ಸಾಯುವುದಿಲ್ಲವೆ? ಪ್ರಯೋಗ ಮಾಡದೆ ಪರಿಣಾಮ ಕಾಣುವುದು ಹೇಗೆ ಸಾಧ್ಯ? ನಾಲ್ಕು ವರ್ಷದ ಬಾಲಕನ ಅದ್ಭುತ ಸಾಹಸವನ್ನು ನೋಡಿ ಹರ್ಷಿಸಿ, ಪ್ರೋತ್ಸಾಹಿಸಿ, ಆರ್ಥಿಕ ಸಹಕಾರ ನೀಡಿ ಅವನನ್ನು ಬೆಳೆಸಿ ನಂತರ ಈ ದೇಶಕ್ಕೆ ಕೀರ್ತಿ ತರುವಂತೆ ಅಂತರರಾಷ್ಟ್ರೀಯ ವ್ಯಕ್ತಿಯನ್ನಾಗಿ ಮಾಡಬಹುದಲ್ಲವೆ?

ಬಾಲಕಾರ್ಮಿಕರನ್ನು ಗಣಿಗಳಿಂದ, ಭಟ್ಟಿಗಳಿಂದ, ಹೋಟೆಲ್‌ಗಳಿಂದ, ಫ್ಯಾಕ್ಟರಿಗಳಿಂದ ದಾಳಿ ಮಾಡಿ ತಂದು ಜೊತೆಗೆ ನಿಂತು ಪತ್ರಿಕೆಗಳಲ್ಲಿ ಫೋಟೋ ಹಾಕಿಸಿಕೊಳ್ಳುತ್ತಾರೆ ; ಅವರನ್ನು ತಮ್ಮ ಮನೆಗೆ, ರಾಜ್ಯಕ್ಕೆ ಅಟ್ಟುತ್ತಾರೆ. ಯಾವ ತಾಯಿಗೆ ತಾನೆ ತನ್ನ ಮಕ್ಕಳು ಓದಬೇಕು. ವಿದ್ಯಾವಂತರಾಗಬೇಕು ಎಂಬ ಆಸೆ ಇರದು; ಓಣಿ ಓಣಿಗೆ ಸಾರಾಯಿ ಅಂಗಡಿಗಳನ್ನು ಸರ್ಕಾರವು ತೆರೆಸುತ್ತದೆ. ಉತ್ತಮವಾದ ಕುಡಿಯುವ ನೀರನ್ನು ಕೊಡಲು ಅಸಮರ್ಥವಾಗಿ ಸರ್ಕಾರಗಳು ಯಥೇಚ್ಚವಾಗಿ ಸಾರಾಯಿ ಲಭ್ಯವಾಗುವಂತೆ ಮಾಡುತ್ತವೆ. ಗಂಡಸರು ಕುಡಿದು ಹಾಳಾಗುವದಲ್ಲದೆ ಹೆಂಡತಿ ಮಕ್ಕಳನ್ನು ಉಪವಾಸ ಕೆಡವಿ ಜೊತೆಗೆ ಹಿಂಸಿಸುತ್ತಾರೆ. ಕುಡಿದು ಕುಡಿದು ಅಕಾಲಿಕ ಮರಣವನ್ನು ಹೊಂದುತ್ತಾರೆ. ನಿಸ್ಸಹಾಯಕರಾದ ಹೆಣ್ಣುಮಕ್ಕಳನ್ನು ಚಿಕ್ಕ ಮಕ್ಕಳನ್ನು ಶಾಲೆ ಬಿಡಿಸಿ ದುಡಿಯಲು ಹಚ್ಚುತ್ತಾರೆ. ಬಾಲಕಾರ್ಮಿಕರನ್ನು ಮನೆಗೆ ಅಟ್ಟಿದರೆ ಸಮಸ್ಯೆಯು ಪರಿಹಾರವಾಗುವುದೆ ?

ಸರ್ಕಾರಗಳಿಗೆ ಅಂದರೆ ರಾಜಕಾರಣಿಗಳಿಗೆ ಮತ್ತು ಅಧಿಕಾರಗಳಿಗೆ ಸಮಸ್ಯೆಯನ್ನು ಪರಿಹರಿಸುವ ಕಳಕಳಿಯಿಲ್ಲ; ಚಿಂತನೆ ಮೊದಲೇ ಇಲ್ಲ. ಹಾಸ್ಯಾಸ್ಪದವಾದ ಅಪ್ರಾಯೋಗಿಕವಾದ ನಿಯಮಗಳನ್ನು ಹೇರಿ ಜನರಿಗೆ ಅಡೆತಡೆ ಒಡ್ಡಿ ಹಿಂಸಿಸುವುದಷ್ಟೆ ಕಾನೂನು ಮತ್ತು ಕಾನೂನು ಪಾಲಕರಿಂದ ನಡೆಯುತ್ತಿರುವ ಕೆಲಸ ಎಂದು ಅತ್ಯಂತ ವಿಷಾದದಿಂದ ಹೇಳಬೇಕಾಗುತ್ತಿದೆ.

ಬಸವ (ವರ್ಣ ಮಾಲಾ) ನಮನ

ಅಗ್ರ ಪುರುಷ, ಶರಣ ಶ್ರೇಷ್ಠ, ಧರ್ಮಪೀಯೂಷ ಬಸವೇಶ
ಆದಿಯ ಲಿಂಗ ನಿನ್ನಿಂದ ಎನಗಾಯಿತು ಪ್ರಾಣಲಿಂಗೇಶ ಬಸವೇಶ
ಇವ ನಮ್ಮವನೆಂದು ಸರ್ವರನು ಆದರಿಸಿದ ಯುಗಪುರುಷ ಬಸವೇಶ
ಈಶನ ಮೀಸಲಪ್ಪ ಭಕ್ತ ನಿನ್ನ ದೆಸೆಯಿಂದೆಮ್ಮ ಭಕ್ತಿ ಬಣ್ಣವೇರಿತು ಮಂತ್ರ - ಪುರುಷ ಬಸವೇಶ
ಉತ್ತಮವೆಂದ ವೇದಶಾಸ್ತ್ರ ಪುರಾಣಗಳ ಒರೆಗೆ ಇಟ್ಟ ವಚನಕಾರ ಬಸವೇಶ
ಊನವಿಲ್ಲದಮಲ ಕರುಣೆ ಪೂರೈಸೊ ದೃಷ್ಟಿಪುರುಷ ಬಸವೇಶ
ಋಷಿಜನ ಜಂಗಮವ ಸ್ತುತಿಸಿ, ಆದರಿಸಿದ ಮತ್ತ್ಯಾಣೇಶ ಬಸವೇಶ
ಎಲ್ಲರಿಗೂ ಅರುಹಿದೆ, ಎಲ್ಲರೊಳು ದೇವನಿರುವ ನಿಜವ ಕಲ್ಯಾಣೇಶ ಬಸವೇಶ
ಏಕೋ ಗುರು ನದ್ವಿತೀಯ ವಿಶ್ವವಿಭೂತಿ, ಸುಜ್ಞಾನಿ ನೀ ಅಮರಾತ್ಮ ಬಸವೇಶ
ಐಕ್ಯಸ್ಥಲವನರುಹಿ, ಧಾರುಣಿಯ ಸಲಹಲಿಕ್ಕೆ ಭಕ್ತನಾದೆ ಭವನಾಶ ಬಸವೇಶ
ಒಲವ ತೋರಿ ಸಕಲ ಜೀವಾತ್ಮರಿಗೆ ಲೇಸನೇ ಬಯಸಿದ ಕರುಣೇಶ ಬಸವೇಶ
ಓಂಕಾರ ನಾದ ಬಿಂದು ಕಳಾತೀತವನರುಹಿದ ಯೋಗೀಶ ಬಸವೇಶ
ಔದಾರ್ಯದ ಹೃದಯದಿಂ ದಾಸೋಹ ಗೈದ ಸತ್ಪುರುಷ ಬಸವೇಶ
ಅಂತರ್ಯಾಮಿ ಲಿಂಗಯ್ಯನ ಅಂಗಯ್ಯಲಿಟ್ಟು ಪೂಜಿಸಿದ ಜಂಗಮ ಪ್ರಾಣೇಶ ಬಸವೇಶ
ಆಃಬಸವಣ್ಣ ನಿನ್ನ ಬಣ್ಣಿಸಲಸದಳವು ಮುಕ್ತಿದಾಯಕ ಮಹಂತೇಶ ಬಸವೇಶ

- ಕುಸುಮ ಗಿ. ತೋಂಟದಾರ್ಯ
ತುಮಕೂರು

ಅಲ್ಲಮ ಪ್ರಭು ದಿವ್ಯಾಲಯದಲ್ಲಿ ದರ್ಶನ
ಅಲ್ಲಮ ಪ್ರಭು ಗಿರಿಯ ಮಹಾಮನೆ ಮಹಾಮಠದಲ್ಲಿ ಮಾರ್ಗದರ್ಶನ

ಲಿಂಗಾಯತ ಧರ್ಮ ಸಂಸ್ಥಾಪಕರಾದ, ವಿಶ್ವವಿಭೂತಿ ಜಗಜ್ಯೋತಿ, ಭಕ್ತಿ ಭಂಡಾರಿ ಕ್ರಾಂತಿಪುರುಷ, ಮಂತ್ರಪುರುಷ, ಮಹಾಪ್ರವಾದಿ, ಮಹಾ ಮಾನವತಾವಾದಿ, ದಲಿತೋದ್ಧಾರಕ, ಪತಿತೋದ್ಧಾರಕ, ಯುಗಪುರುಷ, ಸ್ತ್ರೀಕುಲೋದ್ಧಾರಕ, ಮನುಕುಲೋದ್ಧಾರಕ, ನವಧರ್ಮ ದ್ರಷ್ಟಾರರು, ಕಲ್ಯಾಣ ರಾಜ್ಯ ನಿರ್ಮಾಪಕರು, ನಿಜವಾದ ದೇವರ ಸ್ವರೂಪ ಅರುಹಿದ, ಹೀಗೆ 52 ಗುಣಗಳನ್ನು ಹೊಂದಿದ ಧರ್ಮಪಿತ ಬಸವಣ್ಣನವರು ಇಷ್ಟಲಿಂಗವನ್ನು ಸಂಶೋಧನೆ ಮಾಡಿ ದೇವರ ಸಾಕ್ಷಾತ್ಕಾರ ಮಾಡಿಕೊಳ್ಳುವ ಪೂರ್ವದಲ್ಲಿ ನಡೆ-ನುಡಿ, ಆಚಾರ-ವಿಚಾರ, ಪುಣ್ಯ - ಪಾಪ, ಸುಖ-ದುಃಖ, ಸ್ವರ್ಗ-ಮರ್ತ್ಯ, ಬಡವ-ಶ್ರೀಮಂತ, ಸನ್ಯಾಸಿ-ಸಂಸಾರಿ, ಹೆಣ್ಣು-ಗಂಡು, ಜಾತಿ, ಮತ, ಪಂಥ, ಶ್ರೇಷ್ಠ-ಕನಿಷ್ಠ, ಇತ್ಯಾದಿ ಇತ್ಯಾದಿಗಳ ಬಗ್ಗೆ ಜನರಿಗೆ ದರ್ಶನವಿತ್ತೇ ವಿನಾ ಮಾರ್ಗದರ್ಶನ ಇರಲಿಲ್ಲ.

ಬಸವ ಭಾನುವಿನ ಉದಯವಾಗುವ ಮುನ್ನ ಯೋಗ್ಯ ಗುರುವಿರಲಿಲ್ಲ; ಪೂಜೆಗೆ ಅರ್ಹ ಸಾಧನವಿರಲಿಲ್ಲ, ಅಂಗದ ಮೇಲೆ ಲಿಂಗವಿರಲಿಲ್ಲ, ಮನೆದೈವಗಳಿದ್ದವು, ಪಂಚ ಸೂತಕಗಳಿದ್ದವು, ಶ್ರಾದ್ಧ-ಕರ್ಮಗಳಿದ್ದವು, ಉಪವಾಸ, ನೇಮ, ವ್ರತಗಳಿದ್ದವು, ವಾರ, ತಿಥಿ, ನಕ್ಷತ್ರ, ಮುಹೂರ್ತಗಳ ಕಲ್ಪನೆಗಳಿದ್ದವು, ಶುಭ - ಅಶುಭಂಗಳಿದ್ದವು, ಪಂಚಾಂಗ ನೋಡುವುದಿತ್ತು, ತೀರ್ಥ-ಯಾತ್ರೆಗೆ ಹೋಗುವುದಿತ್ತು, ಸ್ಥಾವರಲಿಂಗ, ಅನ್ಯದೈವ ಪೂಜೆ ಇತ್ತು, ಹಲವು ಕುಲಗೋತ್ರಗಳಿದ್ದವು, ಕುಂಕುಮ, ತಿಲಕಗಳಿದ್ದವು, ವೇದ, ಶಾಸ್ತ್ರ, ಪುರಾಣ, ಆಗಮ, ತರ್ಕಗಳ ಜಂಜಾಟವಿತ್ತು, ಹಲವು ದೇವತೆಗಳ ಕಲ್ಪನೆ ಇತ್ತು, ಜಾತೀಯತೆ, ಮೂಢ ನಂಬಿಕೆ ಜಡ ಸಂಪ್ರದಾಯ, ಕಂದಾಚಾರ, ಶುಷ್ಕಾಚಾರ, ಶ್ರೇಣೀಕೃತ ಸಮಾಜ ವ್ಯವಸ್ಥೆ ಇತ್ತು. ಇವೆಲ್ಲದರ ಬಗ್ಗೆ ಬರೀ ದರ್ಶನವಿತ್ತು ಆದರೆ ಮಾರ್ಗದರ್ಶನವಿರಲಿಲ್ಲ. ನಿಜವಾದ ಗುರು-ಲಿಂಗ-ಜಂಗಮ-ಪ್ರಸಾದ-ದಾಸೋಹ-ಅನುಭಾವಗೋಷ್ಠಿ, ಕಾಯಕ ತತ್ತ್ವದ ಅರಿವಿರಲಿಲ್ಲ.

ಧರ್ಮಗುರು ಬಸವಣ್ಣನವರು, ದೇವ ಸಾಕ್ಷಾತ್ಕಾರ ಹೊಂದಿ, ಇಷ್ಟಲಿಂಗಧಾರಿಗಳಾಗಿ, ದೇವ ಕಾರುಣ್ಯ ಹೊಂದಿ, ಕಲ್ಯಾಣ ರಾಜ್ಯದ ನೀಲ ನಕ್ಷೆ ಮನದಲ್ಲಿ ಸಂಕಲ್ಪಿಸಿಕೊಂಡು, ಕಲ್ಯಾಣವನ್ನು ಪ್ರವೇಶಿಸಿ, ಉನ್ನತವಾದ ಹುದ್ದೆ ಹೊಂದಿ, ಕ್ರಾಂತಿಯ ಹೆಜ್ಜೆ ಇಟ್ಟು ಅನುಭವ ಮಂಟಪ ಕಟ್ಟಿದಾಗ ದ್ವಂದ್ವಗಳ ಕುರಿತು ಪ್ರಾಯೋಗಿಕವಾಗಿ ಮಾರ್ಗದರ್ಶನ ದೊರೆಯಿತು. ಇದರ ಖ್ಯಾತಿ ಎಲ್ಲೆಡೆಯಲ್ಲಿ ಹರಡಿ ಉಡುತಡಿಯಿಂದ ಮಹಾದೇವಿ ಕಲ್ಯಾಣಕ್ಕೆ ಬಂದು ಅಕ್ಕ, ಜಗನ್ಮಾತೆಯಾದರು. ಬಳ್ಳಿಗಾವಿಯಿಂದ ಅಲ್ಲಮರು ಬಂದು ಶೂನ್ಯಪೀಠಾಧ್ಯಕ್ಷರಾಗಿ, ಅಲ್ಲಮ ಪ್ರಭುದೇವರಾದರು; ಸೊನ್ನಲಾಪುರದ ಕರ್ಮಯೋಗಿ ಸಿದ್ಧರಾಮೇಶ್ವರರು, ಲಿಂಗಾಂಗ ಯೋಗಿ, ಬಸವಯೋಗಿ ಸಿದ್ಧರಾಮೇಶ್ವರರಾದರು, ಸೇನಾಧಿಪತಿಯಾದ ಮಾಚಯ್ಯ ವೀರಗಣಾಚಾರಿ ಮಡಿವಾಳ ಮಾಚಿದೇವರಾದರು. ಚಿಕ್ಕ ವಯಸ್ಸಿನ ಚನ್ನಬಸವರು ಷಟ್‌ಸ್ಥಲ ಜ್ಞಾನಿ ಚೆನ್ನಬಸವಣ್ಣನವರಾದರು. ಹೀಗೆ ಇವರು ಷಡ್‌ಗಣಾಧೀಶರ ಸ್ಥಾನ ಅಲಂಕರಿಸಿದರು. ಅನುಭವ ಮಂಟಪದ ಆಧಾರ ಸ್ತಂಭಗಳಾದರು. ಇದಲ್ಲದೆ ಕಾಶ್ಮೀರದ ಮಹಾದೇವ ಭೂಪಾಲ ಮೋಳಿಗೆ ಮಾರಯ್ಯನವರಾದರು, ಸಿಂಹಳದಿಂದ, ಅಫಘಾನಿಸ್ಥಾನದಿಂದ, ಬೆಂಗಾಲದಿಂದ ಹೀಗೆ ದೇಶ ವಿದೇಶಗಳಿಂದ ಸಾವಿರ ಸಾವಿರ ಜನ ಸತ್ಯದ ಸಾಧಕರು, ಶೋಧಕರು ಕಲ್ಯಾಣಕ್ಕೆ ಧಾವಿಸಿ ಬಂದು ಅಸಂಖ್ಯಾತ ಪ್ರಮಥಗಣಂಗಳ ಸ್ಥಾನದಲ್ಲಿ ಶೋಭಾಯಮಾನರಾಗಿ ಪ್ರತಿಯೊಬ್ಬರೂ ಕಾಯಕ ಜೀವಿಗಳಾಗಿ ಮುಕ್ತಾತ್ಮರಾದರು. ಯಾವ ಜಾತಿ, ಮತ,ಪಂಥ, ವರ್ಗ ವರ್ಣ, ಧರ್ಮ ಹೆಣ್ಣು-ಗಂಡು ಎಂಬ ಭೇದ.ಭಾವವಿಲ್ಲದೆ ಬಂದು ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಂಡು ಬೆಳಗಿದರು.

ತಾವು ಬೆಳಗುವುದರ ಜೊತೆಗೆ ಜಗತ್ತಿನ ಇತರ ಮಾನವರೆಲ್ಲರನ್ನು ಬೆಳಗಿಸಲು ಅಮೂಲ್ಯವಾದ ತತ್ವ ಸಂದೇಶಗಳಿಂದ ಕೂಡಿದ ವಚನ ಸಾಹಿತ್ಯವನ್ನು ರಚಿಸಿ ವರವಾಗಿ ಧಾರೆ ಎರೆದರು. ಇದೆಲ್ಲದಕ್ಕೂ ಕಾರಣಿಕರ್ತರು ವಿಶ್ವಗುರು ಬಸವಣ್ಣನವರು. ಪ್ರಧಾನಿಯಾಗಿದ್ದುಕೊಂಡು ಬಿಜ್ಜಳರಾಜನ ಅರಮನೆಯ ನ್ಯಾಯ ನೋಳ್ಪುದು, ಬೆಳಿಗ್ಗೆ ಸಾಯಂಕಾಲ ಅನುಭವ ಮಂಟಪ ಗೋಷ್ಠಿ,

ಮಧ್ಯಾಹ್ನ ಲಕ್ಷದ ಮೇಲೆ ತೊಂಭತ್ತಾರು ಸಾವಿರ ನಿತ್ಯ ಜಂಗಮ ದಾಸೋಹ, ಧರ್ಮ ಪ್ರಚಾರ ಮಾಡಲಿಕ್ಕೆ ಕಳಿಸಿಕೊಡುವ ವ್ಯವಸ್ಥೆ, ವಚನಗಳ ರಚನೆ, ತಾಯಿ ನೀಲಾಂಬಿಕೆ, ಅಕ್ಕನಾಗಲಾಂಬಿಕೆ ಮುಂತಾದ ಶರಣ-ಶರಣೆಯರನ್ನು ಕಣ್ಮುಚ್ಚಿ ಕಲ್ಯಾಣವನ್ನು ದರ್ಶಿಸಿದಾಗ, ನೆನೆಸಿಕೊಂಡಾಗ ಮೈ ರೋಮಾಂಚನವಾಗುವುದು. ಇದಕ್ಕೂ ಮಿಗಿಲಾಗಿ ಕಲ್ಯಾಣ ಕ್ರಾಂತಿಯ ಮುನ್ನ ಧರ್ಮಪಿತನ ಕೂಡಲಸಂಗಮಕ್ಕೆ ನಿರ್ಗಮನ, ಎಳೆಹೂಟೆ ಶಿಕ್ಷೆ ಹರಳಯ್ಯ, ಶೀಲವಂತ ಮಧುವರಸರಿಗೆ ಆದದ್ದನ್ನು, ವೀರ ಮಾತೆ ಅಕ್ಕನಾಗಲಾಂಬಿಕೆ, ಧೀರ ವಿರಕ್ತ ಸನ್ಯಾಸಿ ಚನ್ನಬಸವಣ್ಣ, ವೀರಗಣಾಚಾರಿ ಮಡಿವಾಳ ಮಾಚಿತಂದೆ ಇನ್ನುಳಿದ ಹಿರಿಯ ಶರಣ ಶರಣೆಯರು ಬಸವಣ್ಣನವರ ಪ್ರಾಣದಂತಿರುವ ವಚನ ಸಾಹಿತ್ಯದ ರಕ್ಷಣೆಗಾಗಿ ಕೈಯಲ್ಲಿ ಕತ್ತಿಹಿಡಿದು ಹೋರಾಡಿದ ದೃಶ್ಯವನ್ನು ಕಲ್ಪಿಸಿಕೊಂಡು ಕಣ್ಣಲ್ಲಿ ದುಃಖಮಿಶ್ರಿತ ಭಾಷ್ಪಗಳು ಉದುರುವವು.

ದಂಡಗೊಂಡ ಬಸವಣ್ಣನವರು ಕಲ್ಯಾಣ ತೊರೆದು ಸಾಗುವ ಸಮಯದಲ್ಲಿ ಕೆಲವರು ಅವರನ್ನು ಕೇಳುತ್ತಾರೆ, ಅಪ್ಪನವರೆ ಮತ್ತೆ ಯಾವಾಗ ಬರುವುದು? ಅಪ್ಪನವರು ಅಪ್ಪಣೆ ಕೊಡಿಸಿದರು. ನಾವು ಬರುವುದಿಲ್ಲ, ನಮ್ಮವರು ಬರುತ್ತಾರೆ ಅಂತಾ. ಇದಕ್ಕೆ ಪುಷ್ಟಿಕೊಡುವಂಥ ವಚನ ಈ ಕೆಳಗಿನಂತೆ ಇದೆ.

ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆನಬೇಡ,
ಮುಂದಣ ಫಲದೊಳಗರಸಿಕೊ!
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆಂದೆನಬೇಡ,
ಮುಂದಣ ಬಣ್ಣದೊಳಗರಸಿಕೊ!
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆಂದೆನಬೇಡ, ಮುಂದಣ ಅಗ್ನಿಯೊಳಗರಸಿಕೊ!
ಲಿಂಗದೊಳಗೆ ಪ್ರಾಣ, ಪ್ರಾಣದೊಳಗೆ ಲಿಂಗ,
ಇದು ಕಾರಣ ಕೂಡಲಚನ್ನಸಂಗನ ಶರಣರ
ಪ್ರತಿಬಿಂಬದೊಳಗರಸಿಕೊ ಸಂಗನ ಬಸವಣ್ಣನ.
- 702

ಎಂದು ಷಟಸ್ಥಲ ಜ್ಞಾನಿ ಚನ್ನಬಸವಣ್ಣನವರು ಭವಿಷ್ಯವಾಣಿ ನುಡಿದಂತೆ 800 ವರ್ಷಗಳ ನಂತರ, ಕಲ್ಯಾಣ ಕ್ರಾಂತಿಯ ನಂತರ 12ನ್ನು ತಿರುವು ಮುರುವು ಮಾಡಿದಾಗ 21ನೆಯ ಶತಮಾನದಲ್ಲಿ ಈ ಧರ್ಮದ ಅಪ್ಪ ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮದ ಸತ್ಯದರ್ಶನ, ಮಾರ್ಗದರ್ಶನ, ಲಿಂಗದೇವ ಕಾರುಣ್ಯ, ಬಸವ ಗುರುವಿನ ಅನುಗ್ರಹ, ಜಗನ್ಮಾತೆ ಅಕ್ಕಮಹಾದೇವಿ, ಶೂನ್ಯಪೀಠಾಧೀಶ ಅಲ್ಲಮ ಪ್ರಭು, ಬಸವ ಯೋಗಿ ಸಿದ್ಧರಾಮೇಶ್ವರ, ಚಿನ್ಮಯ ಜ್ಞಾನಿ ಚನ್ನಬಸವಣ್ಣ, ವೀರಗಣಾಚಾರಿ ಮಡಿವಾಳ ಮಾಚಿದೇವರು, ದಾಸೋಹ ಸಂಪನ್ನೆ ನೀಲಮ್ಮ ತಾಯಿ, ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕೆ ಮುಂತಾದ ಅಸಂಖ್ಯಾತ ಪ್ರಮಥ ಗಣಂಗಳು, ಶರಣ-ಶರಣೆಯರ ದಯೆಯಿಂದ ಪರಮ ಪೂಜ್ಯ ಲಿಂಗೈಕ್ಯ ಲಿಂಗಾನಂದ ಮಹಾ ಸ್ವಾಮೀಜಿಯವರು ಹಾಗೂ ಪರಮ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು ಲಿಂಗಾಯತ ಧರ್ಮದ ಪುನರುತ್ಥಾನಕ್ಕೆ ದೊರೆತಿದ್ದು ನಮ್ಮ ನಿಮ್ಮೆಲ್ಲರ ಭಾಗ್ಯ ಸೌಭಾಗ್ಯವೆಂದೇ ಭಾವಿಸಬೇಕು.

ಈ ಗುರುದ್ವಯರ ಪಾದ ಸ್ಪರ್ಶದಿಂದ, ಪ್ರವಚನದಿಂದ ಭಾರತವರ್ಷ ಅಲ್ಲ, ಬೇರೆ ಬೇರೆ ದೇಶಗಳಲ್ಲಿ ಸಹ ಮಾರ್ಗದರ್ಶನ ದೊರೆತಿದೆ, ದೊರೆಯುತ್ತಾ ಇದೆ. ಇವರು ಪಾದವಿಟ್ಟು ಬೆಳೆಸಿದ ಕ್ಷೇತ್ರಗಳು ಅವಿಮುಕ್ತ ಕ್ಷೇತ್ರಗಳಾಗಿ ಬೆಳೆಯುತ್ತಿವೆ. ಉದಾ: ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ, ಬೆಂಗಳೂರು ಬಸವ ಮಂಟಪ, ಕುಂಬಳ ಗೋಡಿನ ಬಸವ ಗಂಗೋತ್ರಿ, ಕೂಡಲ ಸಂಗಮದ ಮಹಾ ಜಗದ್ಗುರು ಪೀಠ, ಮಹಾಮನೆ ಮಹಾಮಠ, ಬಸವ ಕಲ್ಯಾಣದ ಬಸವ ಮಹಾಮನೆ, ಮಹಾರಾಷ್ಟ್ರದ ಅಲ್ಲಮ ಪ್ರಭು ಗಿರಿಯ, ಅಲ್ಲಮ ಪ್ರಭು ಮಠ, ಕರ್ನಾಟಕ, ಮಹಾರಾಷ್ಟ್ರ, ತಮಿಳು ನಾಡು, ಆಂಧ್ರ ಪ್ರದೇಶ, ದೆಹಲಿಯಂತಹ ನೂರಾರು ಸ್ಥಳಗಳಲ್ಲಿ ಬಸವ ಮಂಟಪಗಳು, ಅನುಭವ ಮಂಟಪದ ಮಾದರಿಯಲ್ಲಿ ಕಾರ್ಯಗೈಯುತ್ತಿವೆ.

ಇವು ಹೇಗೆ ಅವಿಮುಕ್ತ ಕ್ಷೇತ್ರಗಳಾಗಿವೆ ಎಂದು ಕೇಳುತ್ತೀರಾ? ನಿರಂತರವಾಗಿ ಸಾಮೂಹಿಕ ಪ್ರಾರ್ಥನೆ, ಪೂಜೆ, ಪ್ರವಚನ, ಧಾರ್ಮಿಕ ವಿಧಾಯಕ ಕಾರ್ಯಕ್ರಮಗಳು, ಅನಾಥಾಶ್ರಮ, ವೃದ್ಧಾಶ್ರಮಗಳು ನಡೆಯುವುದರೊಂದಿಗೆ ಪ್ರತಿ ವರ್ಷ ಕೂಡಲ ಸಂಗಮ ಸುಕ್ಷೇತ್ರದಲ್ಲಿ ಜನವರಿ 11 ರಿಂದ 15 ರ ವರೆಗೆ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶ, ಬಸವ ಕಲ್ಯಾಣದಲ್ಲಿ ವಿಶ್ವ ಕಾಯಕದ ನಿಮಿತ್ತ ಮೇ 1 ರಿಂದ 3ರವರೆಗೆ ಕಲ್ಯಾಣ ಪರ್ವ, ಮಹಾರಾಷ್ಟ್ರದ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣ ಮೇಳ ಅಲ್ಲದೆ ಬಸವ ತತ್ತ್ವ ತರಬೇತಿ ಕಮ್ಮಟ ಎಡೆಬಿಡದೆ ಸಾಗಿವೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಅಷ್ಟೆ ಅಲ್ಲದೆ ಕನ್ನಡ, ಮರಾಠಿ, ಹಿಂದಿ ತಮಿಳು ತೆಲುಗು ಇಂಗ್ಲೀಷ್ ಭಾಷೆಯಲ್ಲಿ ನೂರಾರು ಗ್ರಂಥಗಳು, ಕಲ್ಯಾಣ ಕಿರಣ, ಬಸವ ಕಿರಣ ಪತ್ರಿಕೆಗಳು ನೂರಾರು ರೀತಿಯ ವಚನಗಳು, ಹಾಡುಗಳು, ಪ್ರವಚನದ ದೃಶ್ಯಶ್ರಾವ್ಯ ಕ್ಯಾಸೆಟ್, ಸಿಡಿ ಕೆಸೆಟ್‌ಗಳು ಹೊರ ಹೊಮ್ಮಿವೆ. ಇವೆಲ್ಲದಕ್ಕೂ ಕಾರಣ ಕರ್ತರು ಕ್ರಾಂತಿಕಾರಕ, ಧರ್ಮ ಪ್ರಚಾರಕರು, ಅನುಭಾವ ಸಾಹಿತ್ಯ ರಚನೆಯಲ್ಲಿ, ಸಂಗೀತದಲ್ಲಿ ಸಂಸ್ಥೆ ಕಟ್ಟುವುದರಲ್ಲಿ, ಸಮಾಜ ಸಂಘಟನೆಯಲ್ಲಿ ಲಿಂಗಾಯತ ಧರ್ಮ ಸಾಹಿತ್ಯ ರಚನೆಯಲ್ಲಿ ಎಲ್ಲದರಲ್ಲಿಯೂ ಸಾರ್ವಭೌಮರಾದ ಪರಮ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು, ಇವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಹಗಲಿರುಳು ಸೇವೆ ಸಲ್ಲಿಸುತ್ತಿರುವ ಹಲವಾರು ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು ಮತು ಸಾಧಕ ವರ್ಗದವರು.

ಅಲ್ಲಮ ಪ್ರಭು ಗಿರಿಯ ವಿಶೇಷತೆ

ಇದೊಂದು ಬಹು ಎತ್ತರವಾದ ಪರಿಶುದ್ಧ ವಾಯುವಿನಿಂದ ಒಡಗೂಡಿದ, ಯಾವ ದೃಷ್ಟಿಯಿಂದಲೂ ಮಲಿನಗೊಳ್ಳದ ಸುಂದರ ತಪೋಸ್ಥಾನ. ಬಸವ ಧರ್ಮ ಪೀಠದ ಮಹಾಜಗದ್ಗುರುಗಳಾದ ಪರಮ ಪೂಜ್ಯ ಮಾತಾಜಿಯವರು 14 ಎಕರೆ ಜಾಗ ಖರೀದಿಸಿದ ಈ ಸ್ಥಾನದ ಎಡ ಬಲಕ್ಕೆ ಜಂಗಮ ಜ್ಯೋತಿ ಮಹಾತಪಸ್ವಿ ವ್ಯೋಮ ಕಾಯ ಸಿದ್ಧ ಅಲ್ಲಮ ಪ್ರಭು ದೇವರು ಹಾಗೂ ಲಿಂಗಾಂಗ ಯೋಗಿ ಸಿದ್ಧರಾಮೇಶ್ವರರ ಪವಿತ್ರ ಸ್ಥಾನ. ಅಲ್ಲಮ ಪ್ರಭುಗಳು ಶ್ರೀ ಸಿದ್ಧರಾಮೇಶ್ವರರನ್ನು ಬೀಳ್ಕೊಡುವಾಗ ಇಬ್ಬರೂ ಸಂದರ್ಶಿಸಿದ ಶರಣು ಶರಣಾರ್ಥಿ ಹೇಳಿದ ತೀರಗುತ್ತಿ ಸ್ಥಾನ. ಬೆಳಗಿನ ಜಾವದಲ್ಲಿ ಜಗತ್ತಿಗೆ ಬೆಳಗು ಪ್ರಕಾಶವನ್ನು ನೀಡುವ ಸೂರ್ಯ ಉದಯ ಹಾಗೂ ಸಾಯಂಕಾಲದ ಸೂರ್ಯಾಸ್ತವನ್ನು ಕಾಣುವ ಸುಂದರ ತಾಣ. ಕೆಲವು ವೇಳೆ ಬೆಳಗಿನ ಜಾವದಲ್ಲಿ ನವಿಲುಗಳನ್ನು ನೋಡುವ ಸ್ಥಾನ. 200-300 ಕಿ.ಮೀ.ದೂರದಿಂದ ರತ್ನಗಿರಿ ಸಮೀಪ ಇರುವ ಸಮುದ್ರದ ಮೇಲ್ಭಾಗದಿಂದ ಉದಯಿಸಿ ಧಾವಿಸಿ ಬರುವ ಮೋಢಗಳ ದೃಶ್ಯ ಮಳೆಗಾಲದಲ್ಲಿ ನಮ್ಮೆದುರಿಗೆ ಹಾದು ಹೋಗುವ ರಾಶಿ ರಾಶಿ ಮೋಡಗಳ ಸುಂದರ ದೃಶ್ಯ. ಮಂಜು ಕವಿದಾಗ ಎಲ್ಲಿ ನೋಡಿದಡಲ್ಲಿ ಬೆಳಕಿನ ರಾಶಿಯೇ.4-5ಫೂಟ ಅಂತರದಲ್ಲಿ ಯಾವ ವಸ್ತುವೂ ಕಾಣದೆ ಇರುವ ನೋಟ. ಪ್ರತಿ ದಿನ ರಭಸದಿಂದ ಆಗಾಗ ಬೀಸುವ ಗಾಳಿಯ ನಾದ.ಸುಮ್ಮನೆ ಕುಳಿತರೆ ಓಂಕಾರ ನಾದವು ತಾನಾಗಿಯೇ ಕೇಳುವಂಥ ಅದ್ಭುತ ಏಕಾಂತ ಸ್ಥಾನ.

ರಾತ್ರಿಯ ಸಮಯದಲ್ಲಿ ಮೋಡಗಳಿಲ್ಲದಾಗ ಆಕಾಶದ ಕಡೆಗೆ ದೃಷ್ಟಿ ಹರಿಸಿದಾಗ ಸುತ್ತಲೂ ನಕ್ಷತಗಳ ರಾಶಿಯನ್ನು ನೋಡಿದಂತೆ ತೀರುಗುತ್ತಿಯ ಪವಿತ್ರ ಸ್ಥಾನದಲ್ಲಿ ಒಂದು ಸುತ್ತು ಸ್ವಲ್ಪ ಕೆಳಗೆ ಕಣ್ಣಾಡಿಸಿದರೆ ನಕ್ಷತ್ರಗಳಂತೆ ಕೆಂಪು ಬಿಳಿ ಹೊಳೆಯುವ ಬೆಳಕಿನ ರಾಶಿ.(ಸುತ್ತಲೂ ಊರುಗಳಿರುವುದರಿಂದ) ನೋಡಲು ಕಣ್ಣುಗಳಿಗೆ ಹಬ್ಬ, ನೂರಾರು ಕಿ.ಮೀ.ದೂರದವರೆಗೆ ಹಗಲೆನಲ್ಲಿ ದೃಷ್ಟಿ ಹರಿಸಿದಾಗ ಬೆಟ್ಟಗುಡ್ಡಗಳು ನದಿ ಕೆರೆಗಳು, ಗಿಡ ಮರಗಳ ನೋಟ; ಇಂಥ ಪರಮ ಪವಿತ್ರ ಸ್ಥಳದಲ್ಲಿ ಕೆಲವು ದಿವಸ ವಾಸಿಸಿದರೆ ಭೌತಿಕ ರೋಗ, ಮಾನಸಿಕ ರೋಗಗಳನ್ನು ಕಳೆದುಕೊಳ್ಳಬಹುದು. ಬಿ.ಪಿ ಶುಗರ್, ಅಸ್ತಮಾ ಇನ್ನಿತರ ಕಾಯಿಲೆಗಳಿಗೆ ದಿವ್ಯ ಔಷಧಿ ಸ್ಥಾನ. ಏಕೆಂದು ನೀವು ಕೇಳಬಹುದು. ಇಲ್ಲಿ ಮೊಟ್ಟಮೊದಲನೆಯದಾಗಿ ಜನ ವಸತಿ ಇಲ್ಲದ (ನಮ್ಮ ಆಶ್ರಮದ 5-6 ಜನರನ್ನುಳಿದು) ಹವಾ ಮಾಲಿನ್ಯವನ್ನುಂಟು ಮಾಡುವ ಯಾವುದೇ ಯಂತ್ರ, ವಾಹನಗಳ ಕಾಟವಿಲ್ಲ, ಫ್ಯಾಕ್ಟರಿಗಳು ಉಗುಳುವ

ಹೊಗೆಯ ತಾಪತ್ರಯವಿಲ್ಲ. ಶಬ್ದ ಮಾಲಿನ್ಯವನ್ನುಂಟು ಮಾಡುವ ಯಾವ ವಾಹನ, ಯಂತ್ರೋಪಕರಣ, ಮನಸ್ಸನ್ನು ಕೆರಳಿಸುವ ಹಾಡುಗಳ ಹಾವಳಿಗಳ ಸುಳುಹಿಲ್ಲ. ಬಹು ದೂರ ದೂರ ಸುತ್ತಲೂ ಬೆಣ್ಣೆಯಂತಹ ಕರಿ ಕೆಂಪು ಬಂಗಾರವನ್ನು ಬೆಳೆಯುವ ಫಲವತ್ತಾದ ಭೂಮಿ.

ಈ ಭೂಮಿಯ ಮೇಲೆ ನಡೆದಾಡಿದಾಗ ಗಾದಿಯ ಮೇಲೆ ಪಾದವನ್ನಿಟ್ಟಂತಾಗುವುದು. ನೀರಿನ ಸೌಕರ್ಯ ಒದಗಿದರೆ ಏನು ಬೇಕಾದರೂ ಎಷ್ಟು ಬೇಕೋ ಅಷ್ಟು ಯಾವ ಬೆಳೆಯನ್ನಾದರೂ ಬೆಳೆದು ಫಲವನ್ನು ಪಡೆಯಬಹುದು. ಇದಲ್ಲದೆ ಲಿಂಗಾಯತ ಗಣ ಮೇಳ ಕಾರ್ಯಕ್ರಮ ನಡೆದ ಸಮಯದಲ್ಲಿ ಲಕ್ಷ ವೃಕ್ಷಗಳನ್ನು ನೆಡುವ ಸಂಕಲ್ಪ ಮಾಡಿದ್ದಾರೆ. ಇಂಥ ಪರಮ ಪವಿತ್ರ ಸ್ಥಾನಕ್ಕೆ ಪ್ರತಿ ವರ್ಷ ಯುಗಾದಿಯ ದಿನ, ಹಿಂದೂ ಮುಂದು ಒಟ್ಟು ಮೂರು ದಿವಸ ಲಿಂಗಾಯತ ಗಣ ಮೇಳಕ್ಕೆ ತಾವೆಲ್ಲರೂ ತಪ್ಪದೆ ಬನ್ನಿರಿ ; ಇದಲ್ಲದೆ ನಡುವೆ ಯಾವ ಸಮಯದಲ್ಲಾದರೂ -ಮಳೆಗಾಲ ಬಿಟ್ಟು, ಬಂದು ನೆಮ್ಮದಿಯನ್ನು ಪಡೆದುಕೊಳ್ಳಿರಿ. ಈಗಂತೂ (ಜೂನ್‌ದಿಂದ ಅಕ್ಟೋಬರ್‌ವರೆಗೆ) ವಿಪರೀತ ಮಳೆ, ಮನೆಯಿಂದ ಹೊರಗೆ ಹೆಜ್ಜೆ ಇಡಲು ಸಹ ಆಗುತ್ತಿಲ್ಲ. ಮಹಾಮನೆಯ ಆಸರೆಯನ್ನು ಬಸವ ಸುತರಿಗೆಲ್ಲಾ ಪರಮ ಪೂಜ್ಯ ಮಾತಾಜಿಯವರು ಅವಕಾಶ ಮಾಡಿಕೊಟ್ಟಿದ್ದಾರೆ.

ಅಲ್ಲಮ ಪ್ರಭು ದಿವ್ಯಾಲಯದಲ್ಲಿ ಯಾವ ಜಾತಿ ಮತ ಪಂಥ ಧರ್ಮಗಳ ಬೇಧವಿಲ್ಲದೆ ಭಕ್ತರು ಬಂದು ಜ್ಯೋತಿಯ ದರ್ಶನ ಪಡೆದು ಪುಳಕಿತರಾಗಿ ಜ್ಯೋತಿಯ ಮಹಿಮೆ ಕೇಳುತ್ತಾರೆ. ಅಲ್ಲಮ ಪ್ರಭುವಿನ ಬಗ್ಗೆ ಶ್ರೀ ಸಿದ್ಧರಾಮೇಶ್ವರರ ಕುರಿತು, ಸ್ಥಾನದ ಮಹಿಮೆಯ ಬಗ್ಗೆ, ಧರ್ಮದ ಬಗ್ಗೆ ಪೂಜಾರಿ ಒಡೆಯರ ಮನೆತನದವರನ್ನು ಕೇಳುತ್ತಾರೆ. ಆದರೆ ಅವರು ಹೇಳುತ್ತಾರೆ. "ಇಲ್ಲಿ ದರ್ಶನ ಮಾತ್ರ; ನಿಮಗೆ ಎಲ್ಲ ರೀತಿಯ ಮಾರ್ಗದರ್ಶನ ಬೇಕಾದರೆ ಅಲ್ಲಿ ಹೋಗಿ." ಎಂದು ನಮ್ಮ ಕಡೆಗೆ ತೋರಿಸುತ್ತಾರೆ. 1.ಕಿ.ಮೀ ದೂರದಲ್ಲಿ ಬಸವ ಧರ್ಮ ಪೀಠದ ಮಹಾಮನೆ ಮಹಾಮಠದಲ್ಲಿ ಹೊಟ್ಟೆಯ ಪ್ರಸಾದದೊಂದಿಗೆ ನೆತ್ತಿಯ ಪ್ರಸಾದವೂ ದೊರೆತು. ಜೀವನಕ್ಕೆ ಬೇಕಾದ ಎಲ್ಲ ರೀತಿಯ ಮಾರ್ಗದರ್ಶನ ಬಂದವರಿಗೆಲ್ಲ ದೊರೆಯುತ್ತದೆ. ಈ ಸ್ಥಾನಕ್ಕೆ ಬಂದವರೆಲ್ಲ ಸಿಹಿಯಾದ ತೆಂಗಿನ ಎಳೆ ನೀರಿನಂತೆ ಇರುವ ನಮ್ಮ ಬೋರವೆಲ್ಲ ನೀರನ್ನು ಕುಡಿದು ಸಂತೋಷ ವ್ಯಕ್ತಪಡಿಸಿ ನಿರ್ಗಮಿಸುತ್ತಾರೆ. ಕರ್ನಾಟಕದ ಕೆಲವು ಭಾಗಗಳಿಂದ ಮತ್ತು ಮಹಾರಾಷ್ಟ್ರದ ಸುತ್ತಲಿನ ದೂರ ದೂರದಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತೊಡಗಿದ್ದಾರೆ.

ಪರಮ ಪೂಜ್ಯ ಮಾತಾಜಿಯವರ ಸತ್ ಸಂಕಲ್ಪದಂತೆ ಇದೊಂದು ಅಧ್ಯಾತ್ಮ ಕೇಂದ್ರ, ಪವಿತ್ರ ಸಂದರ್ಶನ ಸ್ಥಾನ, ಆದಿ ಶರಣರ ಸ್ಮಾರಕ ಕ್ಷೇತ್ರ ಆಗಬೇಕಾದರೆ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ಹೇಳುವಂತೆ "ನಾನು ಪ್ರಸಾದ ಮಾಡುವ ಮುಂಚೆ ಜಂಗಮಕ್ಕೆ ಮಾಡಿಸುವೆ. ನಾನು ಬಟ್ಟೆಯ ತೊಡುವ ಮುಂಚೆ ಜಂಗಮಕ್ಕೆ ತೊಡಿಸುವೆ. ನಾನು ಮನೆಯ ಕಟ್ಟುವ ಮುಂಚೆ ಜಂಗಮಕ್ಕೆ ಮನೆಯ ಕಟ್ಟುವೆ" ಅಂದಂತೆ ತಮ್ಮೆಲ್ಲ ಸದ್ಭಕ್ತ ಶರಣರ ಉದಾರ ಕಾಣಿಕೆಗಳ ಅವಶ್ಯಕತೆ ಇದೆ. ಇಲ್ಲಿ ಪ್ರತಿ ಭಾನುವಾರ ಹಾಗೂ ಅಮವಾಸ್ಯೆಗೆ (ದೊಡ್ಡ ಪ್ರಮಾಣ) ಬೆಳಗ್ಗೆ ಬಸವೇಶ್ವರ ಪೂಜಾವ್ರತ, 11 ಗಂಟೆಗೆ ಪೂಜೆ, ಪ್ರಾರ್ಥನೆ, ಪ್ರವಚನ, ಮಹಾಪ್ರಸಾದ ತಪ್ಪದೇ ನಡೆಯುತ್ತಿದ್ದು ಹಲವಾರು ರಾ.ಬ.ದಳದ ಶರಣರನ್ನು ಹಾಗೂ ಸದ್ಭಕ್ತರನ್ನು ಆಕರ್ಷಿಸುತ್ತಿದೆ.

- ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿ
ಅಲ್ಲಮ ಪ್ರಭು ಮಠ, ಅಲ್ಲಮ ಗಿರಿ
ಗ್ರಾಮ - ಅಳತೆ, ತಾ-ಹಾತ್‌ಕಣಂಗಿಲೆ,
ಜಿ-ಕಲ್ಹಾಪುರ, ಮಹಾರಾಷ್ಟ್ರ - ರಾಜ್ಯ.

ಸ್ಫುರಣ ಕಿರಣ

ಒಂದು ಚಿತ್ರವು ಪತ್ರಿಕೆಯಲ್ಲಿ ಪ್ರಕಟವಾಗಿದ್ದು ಅದರಲ್ಲಿ ಒಂದು ದುರಂತದಲ್ಲಿ ಬಂಧು ಬಾಂಧವರು ಮಡಿದಿದ್ದು, ಉಳಿದವರು ಶೋಕಿಸುವ ಒಂದು ದೃಶ್ಯವಿತ್ತು. ಶವಗಳನ್ನು ಮುಂದಿಟ್ಟುಕೊಂಡು ದೊಡ್ಡವರು ಅಳುತ್ತಿದ್ದರು. ಚಿಕ್ಕ ಮಕ್ಕಳು ಸಣ್ಣ ಪುಟ್ಟ ವಸ್ತುಗಳಿಗಾಗಿ ಜಗ್ಗಾಡುತ್ತ ಅಳುತ್ತಿದ್ದವು. ಆಗ ಒಂದು ಆಲೋಚನೆ ಮೂಡಿತು . ದೊಡ್ಡ ದುರಂತ ಸಂಭವಿಸಿದೆ.ಆದರೆ ಮಕ್ಕಳಿಗದರ ಪರಿವೆ ಇಲ್ಲ; ಏಕೆಂದರೆ ಅವುಗಳ ಬುದ್ಧಿ ಬೆಳೆದಿಲ್ಲ; ಮುಂದಾಲೋಚನೆ ಬೆಳೆದಿಲ್ಲ.ತಂದೆ-ತಾಯಿಯರನ್ನು ಕಳೆದುಕೊಂಡ ಇವುಗಳ ಭವಿಷ್ಯವೇನು ಎಂದು ದೊಡ್ಡವರು ಚಿಂತಾಕ್ರಾಂತರಾಗಿದ್ದಾರೆ.ಹಾಗೆಯೆ ಸಾಮಾನ್ಯ ಜನರು ಸಣ್ಣಮಕ್ಕಳು ಬಿಸ್ಕೇಟು, ಚಾಕಲೇಟುಗಳಿಗೆ ಬಡಿದಾಡುವಂತೆ ಬರೀ ಹಣ-ಆಸ್ತಿ,ಸಂಪತ್ತು-ಸುಖ, ಹೆಂಡತಿ-ಮಕ್ಕಳು ಮುಂತಾದ ವಸ್ತುಗಳಿಗಾಗಿ ಕಚ್ಚಾಡುತ್ತಿದ್ದಾರೆಯೇ ವಿನಾ ದೇಶಕ್ಕೆ ಏನಾಗುತ್ತದೆ, ಧರ್ಮ ಹೇಗೆ ನಶಿಸುತ್ತಿದೆ, ನೈತಿಕ ಮೌಲ್ಯ ಗಳು ಹೇಗೆ ಕುಸಿಯುತ್ತವೆ ಇಂಬ ಬಗ್ಗೆ ಚಿಂತನೆಯನ್ನೇ ಮಾಡದ ಬಾಲಿಶ ಬುದ್ಧಿಯವರಾಗಿದ್ದಾರಲ್ಲ ಎಂಬ ಖಿನ್ನತೆ ಮೂಡಿತು.

2 . ಗುರುವಿನ ನೆರವು

ದೀಪದಂತಿಹ ಜನ್ಮ
ಬಂದುದು ತಿಳಿಯಬಾರದು, ಹೋಹುದು ತಿಳಿಯ ಬಾರದು.
ಮೇಘದಂತಿಹ ಜನ್ಮ
ಬಂದುದು ತಿಳಿಯಬಾರದು, ಹೋಹುದು ತಿಳಿಯ ಬಾರದು.
ಶಿಶುವಿನಂತಿಹ ಜನ್ಮ
ಬದುಕುವುದು ತಿಳಿಯದು, ಬದುಕಿ ಬಾಳೀತೆಂಬುದು ತಿಳಿಯಬಾರದು
ನೋಡಾ ಕಪಿಲಸಿದ್ದ ಮಲ್ಲಿಕಾರ್ಜುನಾ.

ಸಿದ್ದರಾಮೇಶ್ವರ (ವ.ಸಂ.1603)

ಒಂದೂವರೆ ವರ್ಷದ ಪುಟ್ಟ ಕಲ್ಯಾಣಿ ಆಟವಾಡಿಕೊಳ್ಳುತ್ತಲಿದ್ದಳು. ಕಪಾಟುಗಳ ಡ್ರಾಗಳನ್ನು ಮುಂದಕ್ಕೆ ಎಳೆಯುವುದು, ಹಿಂದಕ್ಕೆ ದೂಡುವುದು ಮುಂತಾಗಿ ಮಾಡುತ್ತಿದ್ದಳು. ಎಡಗೈ ಬೆರಳುಗಳನ್ನು ಡ್ರಾಯರ್‌ದಲ್ಲಿ ಇಟ್ಟು ಬಲಗೈಯಿಂದ ದೂಡಿದಳು ; ಎಡಗೈ ಬೆರಳುಗಳು ಸಿಕ್ಕಿ ಕೊಂಡು ಅಳಲು ತೊಡಗಿದಳು. ನಾವು ಓಡಿ ಹೋಗಿ ಡ್ರಾಯರನ್ನು ಎಳೆದು ಕೈ ಬೆರಳುಗಳನ್ನು ಬಿಡಿಸಿದೆವು. ಆಗ ಒಂದು ವಿಚಾರವು ಸ್ಫುರಿಸಿತು. ಮಾನವನು ಸಹ ಈ ಮುಗ್ಧ ಮಗುವಿನಂತೆ ಪುಣ್ಯ-ಪಾಪಗಳ ದೂಕಾಟದಲ್ಲಿ ತನ್ನನ್ನುತಾನು ಸಿಕ್ಕಿ ಕೊಳ್ಳುವನು. ಪಾರಾಗುವ ಮಾರ್ಗ ತಿಳಿಯದೆ ಬಹಳಷ್ಟು ವ್ಯಾಕುಲತೆಗೆ ಒಳಗಾಗುವನು. ಗುರುವು ಬಂದು ಈ ಸಾಂಸಾರಿಕ ಸಮಸ್ಯೆಯನ್ನು ಸಡಿಲಗೊಳಿಸಿ ಜೀವನವನ್ನು ಬಂಧ ಮುಕ್ತಗೊಳಿಸುವನು. ಅದಕ್ಕಾಗಿಯೇ ಗುರುವಿನ ಕರುಣೆ ಅತ್ಯಂತ ಅವಶ್ಯಕ ಎಂದು ಧರ್ಮ ಶಾಸ್ತ್ರಗಳಲ್ಲಿ ಹೇಳಲಾಗಿದೆ.

ವೀರಶೈವ ವಾದಿಗಳ ಪೀಕಲಾಟ

- ಮಾತಾಜಿ

ಏಪ್ರಿಲ್ ತಿಂಗಳ ಒಂದು ದಿವಸ; ಜರ್ಮನಿಯ ಮ್ಯುನಿಚ್ ವಿಶ್ವವಿದ್ಯಾಲಯದಿಂದ ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯ ಸಾಧಿಸಿ, ಮೊಗ್ಗೆಯ ಮಾಯಿದೇವರ ಶಿವಾನುಭವ ಸೂತ್ರಂ ಎಂಬ ಸಂಸ್ಕೃತ ಗ್ರಂಥದ ಬಗ್ಗೆ ಅಧ್ಯಯನ ನಡೆಸಿರುವ ಓರ್ವ ಮಹಿಳೆ ಬಂದು ಕೆಲವು ಪ್ರಶ್ನೆಗಳನ್ನು ಪಟ್ಟಿ ಮಾಡಿ ಕೊಟ್ಟಳು. ತಾನು ಮೈಸೂರು ವೀಕ್ಷಿಸಲು ಹೋಗಿ ಬರುವುದಾಗಿಯೂ ನಂತರ ಬಂದು ಕಾಣುವುದಾಗಿಯೂ ಹೇಳಿದಳು.

ಬಹಳ ಹಿಂದೆ ಸುಮಾರು 1970ರಲ್ಲಿ ನಾನು ಆ ಪುಸ್ತಕ ಓದಿದ್ದೆ. ಈಗೊಮ್ಮೆ ಓದಿ, ಉತ್ತರಿಸುವುದು ಸರಿಯಾದೀತೆಂದು ನನ್ನ ಪುಸ್ತಕ ಸಂಗ್ರಹದಲ್ಲಿ ಹುಡುಕಿದೆ; ಸಿಕ್ಕಿತು. ಸಂಪಾದಕರು ಆಸ್ಥಾನ ವಿದ್ವಾನ್ ಪಂಡಿತ ವೈ.ನಾಗೇಶ ಶಾಸ್ತ್ರಿಗಳು, ಬಳ್ಳಾರಿ. ಪ್ರಕಾಶಕರು; ಧಾರವಾಡ ಮುರುಘಾಮಠದ ಶ್ರೀನಿಪ್ರ ಮೃತ್ಯುಂಜಯ ಸ್ವಾಮಿಗಳು ಪ್ರಕಟವಾದ ವರ್ಷ 1958.

ಲಿಂಗಾಯತ ಜನರು, ಮಠಾಧೀಶರು, ಸಾಹಿತಿಗಳು, ಶಾಸ್ತ್ರಿಗಳು ಯಾರೋ ಅಪ್ಪನನ್ನು ಹುಡುಕುವ ದಿಶೆಯಲ್ಲಿ, ತಮಗೆ ಸಂಬಂಧವೇ ಇರದ ವೀರಶೈವ ಪದವನ್ನು ತಂದು ಲಿಂಗಾಯತ ಸಮಾಜದ ಮನೆಯೊಳಕ್ಕೆ ಕಸವನ್ನು ತುಂಬಿಕೊಳ್ಳಲು ಎಷ್ಟು ವ್ಯರ್ಥ ಸಾಹಸ ಮಾಡಿದ್ದಾರೆ ಎಂದು ಅನಿಸುತ್ತದೆ.

ಮೊಗ್ಗೆಯ ಮಾಯಿದೇವರ ಇನ್ನೊಂದು ಮಹತ್ವಪೂರ್ಣ ಕೃತಿ ಶತಕ ತ್ರಯ. ಅದನ್ನು ಬರೆಯುವ ವೇಳೆಗೆ ಅವರು ಲಿಂಗಾಯತ ಧರ್ಮವನ್ನು ಸ್ವೀಕರಿಸಿ ಶರಣ ಮಾರ್ಗಿಗಳಾಗಿದ್ದಾರೆ. ಶತಕ ತ್ರಯದಲ್ಲಿ ಅದನ್ನು ಅತ್ಯಂತ ಸ್ಪಷ್ಟವಾಗಿ ಬಿಂಬಿಸಿ ಬಿಟ್ಟಿದ್ದಾರೆ. ಆದರೆ ಶಿವಾನುಭವ ಸೂತ್ರಂ ಬರೆಯುವಾಗ (1430) ಅವರ ಕಿವಿಯ ಮೇಲೆ ಲಿಂಗ-ಅಂಗ, ಷಟಸ್ಥಲ ಮುಂತಾದ ಶರಣ ಸಂಸ್ಕೃತಿಯ ಪದಗಳು ಕಿವಿಯ ಮೇಲೆ ಬಿದ್ದು, ಪ್ರಸ್ತುತ ಕೃತಿಯಲ್ಲಿ ಬಳಕೆಯಾಗಿದ್ದರೂ ವಚನ ಸಾಹಿತ್ಯದಲ್ಲಿ ಬಿಂಬಿತವಾಗುವ ಷಟಸ್ಥಲದ ಜೀವಂತಿಕೆ ಇಲ್ಲಿ ಕಾಣಬರದು. ಮುರುಘಾಮಠದ ಪ್ರಕಟಣೆ ಟೀಕಾರ್ಥ (Commentary) ಸಹಿತವಾಗಿದ್ದು ಅದು ಮುದ್ರಿಸಲ್ಪಡುವಾಗ ಅಥವಾ ಅದಕ್ಕೆ ಆಕರ ಗ್ರಂಥವಾಗಿರುವ ತಾಡ ಓಲೆಯ ಗ್ರಂಥದಲ್ಲಿ ಶ್ರೀಗುರು ಬಸವ ಲಿಂಗಾಯ ನಮಃ ಇದೆಯಾದರೂ, ಇಡೀ ಕೃತಿಯಲ್ಲಿ ಎಲ್ಲೆಲ್ಲೂ ಗುರು ಬಸವಣ್ಣನವರ ಉಲ್ಲೇಖ ಇಲ್ಲ. ಅದೇ ಶತಕ ತ್ರಯದಲ್ಲಿ ಆರಂಭದ ಶ್ಲೋಕದಿಂದಲೇ ಗುರು ಬಸವಣ್ಣನವರನ್ನು ಮತ್ತು ಚನ್ನಬಸವಣ್ಣ - ಅಲ್ಲಮಪ್ರಭು ದೇವರನ್ನು ಸ್ತುತಿಸಲಾಗಿದೆ.

ಶಿವಾನುಭವ ಸೂತ್ರಂದಲ್ಲಿ 3ನೇ ಶ್ಲೋಕದಲ್ಲಿ ಶಿವನನ್ನು, 4ನೆಯ ಶ್ಲೋಕದಲ್ಲಿ ಪಾರ್ವತಿಯನ್ನು 7-8-9ನೆಯ ಶ್ಲೋಕಗಳಲ್ಲಿ ಮಲಪ್ರಭಾ ತಟದಲ್ಲಿರುವ ಐಪುರಿ ಕ್ಷೇತ್ರವನ್ನು ಕವಿ ಸ್ತುತಿಸುವನು ಈ ವಿಧಿಯು ಶುದ್ಧ ಶೈವದ ಪರಿಕ್ರಮವೇ ಹೊರತು ಶರಣ ಧರ್ಮದ ಪರಿಕ್ರಮವಲ್ಲ. ಇನ್ನೊಂದು ಸೋಜಿಗದ ಸಂಗತಿ ಎಂದರೆ ಮೊಗ್ಗೆಯ ಮಾಯಿದೇವರ ಮೂಲ ಸಂಸ್ಕೃತ ಶ್ಲೋಕದಲ್ಲಿ ಶಿವ, ಶೈವ ಎಂದು ಇರುವಲ್ಲಿ, ಕೆಳಗೆ ಕನ್ನಡದಲ್ಲಿ ವ್ಯಾಖ್ಯಾನ ಬರೆದು ವ್ಯಾಖ್ಯಾನದಲ್ಲಿ ಕೃತಕವಾಗಿ ವೀರಶೈವ ಪದವನ್ನು ಸೇರಿಸಲಾಗಿದೆ. ಪಂಚ ಪೀಠದ ಆಚಾರ್ಯರುಗಳು ಅಷ್ಟೇ ಅಲ್ಲ ವಿರಕ್ತರು ಸಹ ಲಿಂಗಾಯತ ಧರ್ಮಕ್ಕೆ ಪ್ರಾಚೀನತೆ ಕಲ್ಪಿಸಲು ವೀರಶೈವವನ್ನು ಎಳೆದು ತಂದಿದ್ದಾರೆ. ಲಿಂಗಾಯತರನ್ನು ವೀರಶೈವರೆಂದು ಗುರುತಿಸಿಕೊಳ್ಳಲು ಹರ(ಯಮ) ಸಾಹಸವನ್ನೇ ಮಾಡಿದ್ದಾರೆ. ಶಂಕರಾಚಾರ್ಯರದು ಬ್ರಹ್ಮಾದ್ವೈತವಾದರೆ ವೀರಶೈವರದು ಶಿವಾದ್ವೈತ ಎಂದು ಗುರುತಿಸಿಕೊಳ್ಳುತ್ತಾರೆ. ಇದನ್ನು ಶಕ್ತಿವಿಶಿಷ್ಟಾದ್ವೈತ ಎನ್ನುತ್ತಾರೆ.

1. ಅದ್ವೈತ ಸಿದ್ಧಾಂತವನ್ನು ಬಸವಾದಿ ಪರಂಪರೆಯವರು ಅತ್ತ ಇರಲಿ ಸ್ವತಃ ಶೈವಾಗಮಗಳು ಅಥವಾ ಶೈವ ಪರಂಪರೆಯವರು ಸಹ ಒಪ್ಪುವುದಿಲ್ಲ. ವೇದಾಂತಿಗಳು (ಪರ) ಬ್ರಹ್ಮ ಎಂದು ಯಾವ ಪರವಸ್ತುವನ್ನು ಸಂಬೋಧಿಸುವರೋ ಅದನ್ನೇ ಆಗಮಿಕರು (ಪರ) ಶಿವ ಎನ್ನುವರು. ಆದ್ದರಿಂದ ಬ್ರಹ್ಮಾದ್ವೈತ - ಶಿವಾದ್ವೈತ ಪರಿಕಲ್ಪನೆಯಲ್ಲಿ ಬೇರೆಯಾಗವು. ಶೈವ ಪರಂಪರೆಯ ಎಲ್ಲ ಶಾಖೆಗಳು ಜೀವ - ಶಿವ, ಪಶು-ಪತಿ-ಪಾಶ ಎಂಬ ವ್ಯತ್ಯಾಸ ಒಪ್ಪುವುದರಿಂದಲೇ ಶೈವ ಪರಂಪರೆ ಭಕ್ತಿ ಪ್ರಧಾನ ಎನಿಸಿದೆ. ವೇದಾಂತ, ಅದ್ವೈತದ ಪ್ರಭಾವಕ್ಕೆ ಒಳಗಾದವರು ಮಾತ್ರ ವಚನ ಸಾಹಿತ್ಯದಲ್ಲೂ ಅದ್ವೈತ ಸಿದ್ಧಾಂತ ಹುಡುಕಲು ಹೋಗುವರು ; ಬಹುಪಾಲು ಜನರಿಗೆ, ಸಾಹಿತಿಗಳಿಗೆ ಸಹಿತ ಅದ್ವೈತ ಸಿದ್ಧಾಂತ ಮತ್ತು ಅದ್ವೈತಾನುಭವದ ವ್ಯತ್ಯಾಸ ಗೊತ್ತಿರದೆ ವಚನ ಸಾಹಿತ್ಯವೂ ಅದ್ವೈತ ಸಿದ್ಧಾಂತವನ್ನು ಹೇಳುತ್ತದೆ ಎಂದು ಬ್ರೇಕ್ ಇಲ್ಲದೆ ಗಾಡಿ ಬಿಡುತ್ತಾರೆ. ಶ್ರೀ ವೈ.ನಾಗೇಶ್ ಶಾಸ್ತ್ರಿಗಳು ಅದನ್ನೇ ಮಾಡಿದ್ದಾರೆ.

2.ಮೊಗ್ಗೆಯ ಮಾಯಿದೇವರು ತಮ್ಮ ಪದ್ಯದಲ್ಲಿ ಶ್ರೀ ವೀರವ್ರತ ಎಂದು ಬಳಸಿದ್ದಾರೆ (ಪುಟ 6) ಅದಕ್ಕೆ ಕೊಟ್ಟಿರುವ ಕನ್ನಡ ವ್ಯಾಖ್ಯಾನದಲ್ಲಿ ಶ್ರೀ ಶಾಸ್ತ್ರಿಗಳು "ವೀರಶೈವ ವ್ರತ" ಎಂದು ಬರೆಯುತ್ತಾರೆ. (ದುರ್) ಉದ್ದೇಶ ಪೂರ್ವಕವಾಗಿ ತಿರುಚಿದ್ದಾರೋ ಅಜ್ಞಾನದಿಂದ ತಿರುಚಿದ್ದಾರೋ ತಿಳಿಯದು; ವೀರವ್ರತ ಬೇರೆ, ವೀರಶೈವ ವ್ರತ ಬೇರೆ ! ಕೆಲವರು ಕಟ್ಟುನಿಟ್ಟಾದ ಶಿವ ಭಕ್ತಿ ಮಾಡಲು ವೀರವ್ರತ ಸ್ವೀಕರಿಸುತ್ತಿದ್ದರು. ಉದಾಹರಣೆಗೆ, (ಸ್ಥಾವರ) ಲಿಂಗ ದರ್ಶನವಿಲ್ಲದೆ ನೀರೂ ಕುಡಿಯುವುದಿಲ್ಲ ಎಂಬುದು ಒಂದು ನಿಯಮ. ಪ್ರಾಣ ಹೋಗುತ್ತಿದ್ದರೂ ಅವರು ಲಿಂಗದ ಗುಡಿ ಸಿಗದೆ ಇದ್ದರೆ ಆಹಾರ-ನೀರು, ಸ್ವೀಕರಿಸುತ್ತಿರಲಿಲ್ಲ. ಧರ್ಮಪಿತ ಬಸವಣ್ಣನವರ ಒಂದು ವಚನದಲ್ಲಿ 'ವೀರವ್ರತಿ' ಎಂಬ ಪದ ಬಳಕೆಯಾಗಿದೆ.

3. "ಜಯಂತಿ ಪರಮ ಶೈವ ః" ಎಂಬ ಪದ ಪುಂಜವು 23ನೇ ಶ್ಲೋಕದಲ್ಲಿ ಬಳಕೆಯಾಗಿದೆ. ಆತನು "ಪರಮ ಶೈವ". ಆದರೆ ಟೀಕಾಕಾರರು ಕನ್ನಡದಲ್ಲಿ ಪರಮ ವೀರಶೈವನಾದ ಮಾಯಿದೇವ ಎನ್ನುತ್ತಾರೆ. ಶ್ಲೋಕ 27-28ರಲ್ಲಿ "ಶಿವ ಸಿದ್ಧಾಂತ ತಂತ್ರಂ" ಎಂದು ಮಾಯಿದೇವರು ಬಳಸುತ್ತಾರೆ. ನಾಗೇಶ ಶಾಸ್ತ್ರಿಗಳು ವೀರಶೈವ ಸಿದ್ಧಾಂತ ಎಂದು ವ್ಯಾಖ್ಯಾನದಲ್ಲಿ ಬಳಸುತ್ತಾರೆ. ಅಂದರೆ ಮಾಯಿದೇವರು ಶಿವಾನುಭವ ಸೂತ್ರಂ ರಚಿಸುವಾಗ ಮಾಯಿದೇವನು ಲಿಂಗಾಯತನಾಗುವುದಿರಲಿ, ವೀರಶೈವನೂ ಆಗಿರದೆ ಶಿವಸಿದ್ಧಾಂತ ತಂತ್ರಾನುಸಾರಿಯಾದ ಶುದ್ಧ ಶೈವನಾಗಿದ್ದ ಎಂಬ ಭಾವ ಖಚಿತವಾಗುತ್ತದೆ.

ಲಿಂಗಾಯತ ಧರ್ಮೀಯ ಶಾಸ್ತ್ರಿ ಪಂಡಿತರು ಸುಮ್ಮಸುಮ್ಮನೆ ತಮ್ಮನ್ನು ವೀರಶೈವರೆಂದು ಕರೆದುಕೊಂಡು ಬಹಳ ಗೊಂದಲಕ್ಕೆ ಒಳಗಾಗಿದ್ದಾರೆ. ಅಭಿಮನ್ಯು ಚಕ್ರವ್ಯೂಹದೊಳಗೆ ಹೋಗಿ ನಂತರ ಬರಲಾರದೆ ಹತನಾದಂತಹ ಪರಿಸ್ಥಿತಿ ಈ ವೀರಶೈವ ವಾದಿಗಳದ್ದಾಗಿದೆ. ವಚನ ಸಾಹಿತ್ಯ ದಿಕ್ಕೂಚಿಯಾಗಿ ಸಿಕ್ಕಿರದಿದ್ದರೂ ಸುಮಾರು 150-200 ವರ್ಷಗಳ ಹಿಂದೆ ಲಿಂಗಾಯತರಲ್ಲಿ ಅವೈದಿಕ ಆಚರಣೆ ರೂಢಿಯಲ್ಲಿ ಬಂದಿದ್ದವು. ಇವರು ಪಂಚ ಸೂತಕ ಆಚರಿಸುತ್ತಿರಲಿಲ್ಲ; ವಿಧವಾ ವಿವಾಹಕ್ಕೆ ಅವಕಾಶವಿತ್ತು. ಶಾಸ್ತ್ರಿ ಪಂಡಿತರು ಕೃತಕವಾಗಿ ವೀರಶೈವವನ್ನು ತಂದು ಹೇರಿದ್ದಲ್ಲದೆ ವೀರಶೈವವು ಅವೈದಿಕವಲ್ಲ, ಆಗಮೋಕ್ತ ಎಂದು ವೀರಶೈವರೇ ಅಲ್ಲದ ಲಿಂಗಾಯತರ ತಲೆಗೆ ತುಂಬ ತೊಡಗಿ ಗೊಂದಲ ಉಂಟು ಮಾಡಿದ್ದಾರೆ. ಅಂಥ ಸನ್ನಿವೇಶದಲ್ಲೇ ಕಷ್ಟ ಪಟ್ಟು ವೀರಶೈವ ಪದವನ್ನು ಮೊಗ್ಗೆಯ ಮಾಯಿದೇವರ ಶಿವಾನುಭವ ಸೂತ್ರಂ ಗ್ರಂಥದ ವ್ಯಾಖ್ಯಾನದಲ್ಲಿ ತೂರಿಸಿದ್ದಾರೆ.

ಮೊಗ್ಗೆಯ ಮಾಯಿದೇವರ ಷಟ್‌ಸ್ಥಲ

ಮೊಗ್ಗೆಯ ಮಾಯಿದೇವರು 1450 ನೆಯ ಕಾಲಮಾನದವರು. ಶಿವಾನುಭವ ಸೂತ್ರಂ ಬರೆಯುವ ಕಾಲಕ್ಕೆ ಬಸವ ಧರ್ಮದ ಪ್ರಭಾವಕ್ಕೆ ನೇರವಾಗಿ ಒಳಗಾಗಿಲ್ಲವಾದರೂ ಅವರ ಕಿವಿಯ ಮೇಲೆ ವಚನ ಸಾಹಿತ್ಯದ ಪ್ರಕ್ರಿಯೆಯ ಪದಗಳು ಬಿದ್ದಿರಲೇ ಬೇಕು. ಹೀಗಾಗಿ ಷಟಸ್ಥಲದ ಪ್ರಸ್ತಾಪ ಮಾಡುತ್ತಾರಾದರೂ ಪರಿಕಲ್ಪನೆಗಳು ಬಹಳ ನಿರ್ಜೀವಗೊಂಡಿವೆ. ವಚನ ಸಾಹಿತ್ಯದಲ್ಲಿ ಬರುವ ಷಟಸ್ಥಲಕ್ಕೂ ಇಲ್ಲಿಯದಕ್ಕೂ ಹೋಲಿಕೆಯೇ ಇಲ್ಲ. 8 ಅಧಿಕರಣಗಳಿಂದ ಕೂಡಿದ ಈ ಕೃತಿಯಲ್ಲಿ 1.ಮಾಯಿದೇವರ ವಂಶಪಾರಂಪರ್ಯ ಕ್ರಮ 2.ಸ್ಥಲ ನಿರ್ದೇಶ 3. ಲಿಂಗಸ್ಥಲ ನಿರೂಪಣ 4.ಅಂಗಸ್ಥಲ ನಿರೂಪಣ 5.ಲಿಂಗಾಂಗ ಸಂಯೋಗ ವಿಧಿ 6.ಸರ್ವಾಂಗಲಿಂಗ ಸಾಹಿತ್ಯ 7.ಅರ್ಪಣ ಸದ್ಭಾವ 8.ಕ್ರಿಯಾ ವಿಶ್ರಾಂತಿ ಎಂದು ಪ್ರಸ್ತಾಪವಾಗುತ್ತವೆ.

ಈ ತತ್ವಗಳನ್ನು ಅಳವಡಿಸಿಕೊಂಡ ಸಾಧಕನನ್ನು ಮಾಯಿದೇವರು ಶಿವಚಾರ್ಯ ಎಂದಿದ್ದಾರೆ ವಿನಾ 'ಶರಣ' ಎಂದು ಕರೆದಿಲ್ಲ. ವಚನ ವಾಙ್ಮಯದ ಜೀವಾಳವೇ 'ಶರಣ' ಎಂಬುದನ್ನು ನಾವೆಲ್ಲ ಅರಿತಿದ್ದೇವೆ. ಅಧ್ಯಾಯ 2, ಶ್ಲೋಕ 1-2 ರಲ್ಲಿ ದೇವದೇವನಾದ ಯಾವ ಶಿವನಿಂದ ಹೇಳಲ್ಪಟ್ಟಿದ್ದೋ ಆ ವಿಷಯವನ್ನು ಇಲ್ಲಿ ಹೇಳುತ್ತಾನೆ ಎನ್ನುತ್ತಾನೆ ಮಾಯಿದೇವ ಆದೇ ವಚನ ವಾಙ್ಮಯದಲ್ಲಿ ಬರುವ ಷಟಸ್ಥಲ "ಸಂಗನ ಬಸವಣ್ಣನಿಂದ ಬಂದ ಬೆಳೆ" ಎನ್ನುತ್ತಾರೆ ಶರಣರು.ಮಾಯಿದೇವರ ವಂಶಪಾರಂಪರ್ಯ ಕ್ರಮ 2.ಸ್ಥಲ ನಿರ್ದೇಶ 3. ಲಿಂಗಸ್ಥಲ ನಿರೂಪಣ 4.ಅಂಗಸ್ಥಲ ನಿರೂಪಣ 5.ಲಿಂಗಾಂಗ ಸಂಯೋಗ ವಿಧಿ 6.ಸರ್ವಾಂಗಲಿಂಗ ಸಾಹಿತ್ಯ 7.ಅರ್ಪಣ ಸದ್ಭಾವ 8.ಕ್ರಿಯಾ ವಿಶ್ರಾಂತಿ ಎಂದು ಪ್ರಸ್ತಾಪವಾಗುತ್ತವೆ. ವಿಷಯವನ್ನು ಇಲ್ಲಿ ಹೇಳುತ್ತಾನೆ ಎನ್ನುತ್ತಾನೆ ಮಾಯಿದೇವ ಆದೇ ವಚನ ವಾಙ್ಮಯದಲ್ಲಿ ಬರುವ ಷಟಸ್ಥಲದಲ್ಲಿ "ಸಂಗನ ಬಸವಣ್ಣನಿಂದ ಬಂದ ಬೆಳೆ" ಎನ್ನುತ್ತಾರೆ ಶರಣರು.ಮಾಯಿದೇವರು ಶಕ್ತಿಯ ಪ್ರವೃತ್ತಿಪರ, ಭಕ್ತಿಯ ನಿವೃತ್ತಿಪರ ಎಂದು ಹೇಳುತ್ತ ಭಕ್ತಿಯಿಂದ ಪ್ರಪಂಚದ ಲಯವೂ ಆಗುವುದು ಎನ್ನುತ್ತಾರೆ. ಭಕ್ತಿಯ ವ್ಯಕ್ತಿಗತ, ಇದರಿಂದ ವೈಯಕ್ತಿಕವಾಗಿ ಬಿಡುಗಡೆ ಆದೀತೇ ವಿನಾ ಪ್ರಪಂಚ ಎಂಬ ವಸ್ತುನಿಷ್ಠ ತತ್ವವು ನಾಶವಾಗುವುದಿಲ್ಲ.ಇಂಥ ವಿವರಣೆಗಳಿಂದಲೇ ವಿದೇಶ ಸಂಶೋಧಕರಿಗೆ ಸಂದೇಶ- ಗೊಂದಲ

ಉಂಟಾಗುತ್ತದೆ.

ಮಾಯಿದೇವರು ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗ ಕುರಿತು ಪ್ರಸ್ತಾಪಿಸುತ್ತಾರೆ. ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹಾಲಿಂಗ ಎಂಬ ಷಡ್ವಿಧ ಲಿಂಗಗಳ ಬಗ್ಗೆಯೂ ಪ್ರಸ್ತಾಪಿಸುತ್ತಾರೆ. ಆದರೆ ಇವು ಯಾಂತ್ರಿಕವಾಗಿ ಉಲ್ಲೇಖಿಸಲ್ಪಟ್ಟಿವೆಯೇ ವಚನ ಶಾಸ್ತ್ರದಲ್ಲಿ ಕಾಣಬರುವ ಜೀವಂತಿಕೆ ಇಲ್ಲಿಲ್ಲ.

ಕೃತಿಯ ಆರಂಭದಲ್ಲಿ ಮಾಯಿದೇವರು ಈ ಎಲ್ಲ ಶಬ್ದಗಳು ಬಹಳ ಪುರಾತನವೆಂದು, ಶಿವೋಕ್ತವೆಂದು ವೇದಾಗಮಗಳಲ್ಲಿ ಹೇಳಲ್ಪಟ್ಟಿರುವುದು ಎಂದು ಹೇಳಿ ಪುರಾತನತೆಯ ಮುದ್ರೆ ಒತ್ತಲು ಯತ್ನಿಸಿದ್ದಾರೆ. ಆದರೆ ನಂತರ ಬರೆದ ಶತಕತ್ರಯದಲ್ಲಿ ಬಸವ ಪುರಾತರಾಚರಿಸಿ ತೋರಿದ ಮಾರ್ಗ ಎಂದು ಸ್ಪಷ್ಟಪಡಿಸುತ್ತಾರೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಸ್ಥಲಗಳ ವಿಚಾರವನ್ನು ಅಷ್ಟೇ ಅಸ್ಪಷ್ಟವಾಗಿ ಹೇಳಿರುವುದಲ್ಲದೆ ಭಕ್ತ ಸ್ಥಲದಿಂದ ಆರಂಭಿಸಿ ಐಕ್ಯಕ್ಕೆ ಹೋಗುವ ಬದಲು ಐಕ್ಯದಿಂದ ಭಕ್ತಸ್ಥಲಕ್ಕೆ ಬರುತ್ತಾರೆ.

ಮಾಯಿದೇವರು ಮಹಾಶೈವ, ಪರಮಶೈವ ಪದಗಳನ್ನು ಬಳಸುತ್ತಾರೆ. (ಶ್ಲೋಕ 37-39) ಆಗಮಗಳು ಅದರಲ್ಲಿ ಪ್ರತಿಪಾದಿತವಾಗುವ ಶೈವ ಮಾರ್ಗವು ವೇದಾಂತದಂತೆ ಶುಷ್ಕ ಜ್ಞಾನವಾಗಿ ಉಳಿಯದೆ ಭಕ್ತಿ ಪ್ರಧಾನವೂ ಆಗಿರುವುದೆಂಬುದು ಗಮನಾರ್ಹ. ಹೀಗಾಗಿ ಶೈವ ಪಂಥಗಳಲ್ಲಿ ದೀಕ್ಷೆ, ಶಕ್ತಿಪಾತಕ್ರಿಯೆ ಮುಂತಾದವು ಬಹಳ ಮಹತ್ವದ ಸ್ಥಾನವನ್ನು ಪಡೆಯುತ್ತವೆ. ವೇಧಾ, ಮಂತ್ರ, ಕ್ರಿಯಾ ಎಂಬ ತ್ರಿವಿಧ ದೀಕ್ಷೆಗಳು ಶೈವ ಮಾರ್ಗದಲ್ಲಿ ಬಹುಮುಖ್ಯ. ಶೈವ ಮಾರ್ಗದ ಉಪದೇಶದಲ್ಲಿ ಗುರುವು ಲಿಂಗವನ್ನು ಕ್ರಿಯಾ ದೀಕ್ಷೆಯಿಂದ ಕೊಡುತ್ತಾನೆ. ಆದರೆ ಅದು ಯಾವ ಲಿಂಗ? ಅದನ್ನು ಮಾಯಿದೇವರು ಸ್ಪಷ್ಟಪಡಿಸುವುದಿಲ್ಲ. ಮೂಲಶ್ಲೋಕದಲ್ಲಿ ಲಿಂಗಂ ಎಂದಿರುವಲ್ಲಿ ಕನ್ನಡ ವ್ಯಾಖ್ಯಾನದಲ್ಲಿ ಶ್ರೀ ನಾಗೇಶ ಶಾಸ್ತ್ರಿಗಳು ಇಷ್ಟಲಿಂಗ ಎಂದು ಬರೆಯುತ್ತಾರೆ.

ಒಂದು ವೇಳೆ ಮಾಯಿದೇವರು ಶತಕತ್ರಯವನ್ನು ಬರೆದು ಅದರಲ್ಲಿ ಶ್ರೀ ಗುರು ಬಸವಣ್ಣನವರನ್ನು, ಶರಣರನ್ನು ಸ್ತೋತ್ರ ಮಾಡದೆ ಇದ್ದರೆ, ಶಿವಾನುಭವ ಸೂತ್ರಂ ಪುಸ್ತಕ ಬಸವ ಪೂರ್ವದ್ದು ಇದರಲ್ಲಿ ಷಟಸ್ಥಲವಿದೆ ಎಂದು ವೀರಶೈವವಾದಿ ಪಂಡಿತರು ಖಂಡಿತಾ ಪ್ರಯತ್ನಿಸುತ್ತಿದ್ದರು. ಮಾಯಿದೇವರ ಕಾಲ ನಿರ್ಣಯವೂ ಆಗಿರುವುದರಿಂದ ಸುಳ್ಳು ಹೇಳಲು ಸಾಧ್ಯವಾಗುತ್ತಿಲ್ಲ. ಆದರೆ ಮಾಯಿದೇವರ ಸಂಸ್ಕೃತ ಶ್ಲೋಕಗಳಲ್ಲಿ ಶೈವ, ಮಹಾಶೈವ ಇದ್ದರೆ ವ್ಯಾಖ್ಯಾನದಲ್ಲಿ ವೀರಶೈವ ಎಂದು, ಶ್ಲೋಕಗಳಲ್ಲಿ ಲಿಂಗ ಇದ್ದರೆ ವ್ಯಾಖ್ಯಾನದಲ್ಲಿ ಇಷ್ಟಲಿಂಗ ಎಂದು ಬರೆಯುವ ಪ್ರಯತ್ನವನ್ನು ಶ್ರೀ ನಾಗೇಶ ಶಾಸ್ತ್ರಿಗಳು ಮಾಡಿದ್ದಾರೆ.

ಮನೆಯಲ್ಲಿ ಸಮೃದ್ಧವಾಗಿ ಹೈನವಿದ್ದಾಗ ಹಾಲು ಕಾಯಿಸಿ ಬೆಣ್ಣೆ - ತುಪ್ಪ ಮಾಡಿಕೊಳ್ಳುವ ಬದಲು ಊರೆಲ್ಲ ತಿರುಗಿ ಡಾಲ್ಡಾ ತಂದಂತೆ ವೀರಶೈವವಾದಿ ಶಾಸ್ತ್ರಿ ಪಂಡಿತರು ವಚನ ಸಾಹಿತ್ಯದಂತಹ ಧರ್ಮ ಸಂಹಿತೆ ಬಿಟ್ಟು ಸಂಸ್ಕೃತ ಗ್ರಂಥಗಳ ಆಧಾರ ಹುಡುಕಲು, ಸನಾತನತೆ ಸ್ಥಾಪಿಸಲು ಬಹಳ ಹೆಣಗುವುದನ್ನು ಕಂಡರೆ ನಗುವೂ ಬರುತ್ತದೆ, ದುಃಖವೂ ಆಗುತ್ತದೆ.

ಆದ್ದರಿಂದ ಎಲ್ಲ ಗೊಂದಲ ಪರಿಹಾರವಾಗಲು ಇರುವ ಮಾರ್ಗವೆಂದರೆ ವಚನ ಸಾಹಿತ್ಯದ ಅಧ್ಯಯನ, ಪಾರಾಯಣ, ಚಿಂತನ ಮಾತ್ರ.

ಇಂಥ ಲೇಖನ ಬರೆಯಲು ನನಗೆ ಸ್ವಭಾವತಃ ಆಸಕ್ತಿ ಇಲ್ಲ ಆದರೆ ಅನಿವಾರ್ಯವಾಗಿ ವೀರಶೈವವಾದಿಗಳ ಟೊಳ್ಳುತನ ಬಯಲು ಮಾಡಲು ಬರೆಯಬೇಕಾಗುತ್ತಿದೆ. ಇದೇ ದೃಷ್ಟಿಕೋನದಿಂದಲೇ, ನಮ್ಮ ಧರ್ಮ - ಸಮಾಜಗಳಿಗೆ ಯಾವುದೇ ರೀತಿ ಸಂಬಂಧಿಸಿರದ ಸಿದ್ಧಾಂತ ಶಿಖಾಮಣಿ ಕುರಿತು ಸಹ ಬರೆಯಲು ನನಗೆ ಆಸಕ್ತಿ ಇಲ್ಲ ಆದರೆ ಕೆಲವು ಬಸವತತ್ತ್ವಾಭಿಮಾನಿಗಳಿಂದ ಸಿದ್ಧಾಂತ ಶಿಖಾಮಣಿಯ ವಿಮರ್ಶೆ ಮಾಡಬೇಕೆಂದು ಒತ್ತಡ ಬರುತ್ತಿದೆ. ನೋಡೋಣ.

- ಮಾತಾಜಿ

ಜೇಡರ ದಾಸೀಮಯ್ಯಾ ಬಸವಣ್ಣನವರ ಸಮಕಾಲೀನ

ಪೂಜ್ಯ ಮಾತಾಜಿಯವರಿಗೆ ಶರಣು,

ಇದೇ ಆಗಸ್ಟ್ ತಿಂಗಳ ಕಲ್ಯಾಣ ಕಿರಣದಲ್ಲಿ ತಾವು ಪ್ರಕಟಿಸಿರುವ ದೇವರ ದಾಸೀಮಯ್ಯಾ, ಜೇಡರ ದಾಸೀಮಯ್ಯಾ ಬೇರೆ ಬೇರೆ ಎಂಬ ಲೇಖನವು ತುಂಬಾ ಸಕಾಲಿಕ. ಲೇಖನವು ವಿದ್ವಾಂಸರಿಂದ ಸಾಮಾನ್ಯ ಓದುಗರಿಗೂ ರುಚಿಸುವಂತೆ ತಾವು ಬರೆದಿದ್ದೀರಿ. ಅದಕ್ಕಾಗಿ ಅಭಿನಂದನೆಗಳು. ಮತ್ತು ಶರಣು.

ನಾನು ಹಿಂದೆ ಜೇಡರದಾಸೀಮಯ್ಯನ ತವನಿಧಿಯ ಬಗ್ಗೆ ಬರೆದಿದ್ದ. ಆಗ ಈಗಿನಷ್ಟು ಮಾಹಿತಿ ಸಿಕ್ಕಿರಲಿಲ್ಲ. ನಂತರ ಅಭ್ಯಾಸ ಮಾಡುತ್ತಾ ಹೋದಂತೆ ಜೇಡರ ದಾಸೀಮಯ್ಯನಿಗಿಂತಲೂ ಸುಮಾರು 100 ವರ್ಷಗಳಷ್ಟು ಹಿಂದಿನ ವ್ಯಕ್ತಿ ದೇವರ ದಾಸಿಮಯ್ಯ ಎಂಬುದು ಗೊತ್ತಾಗಿದೆ. ಇತ್ತೀಚೆಗೆ ದುಗ್ಗಳೆಯ ಎರಡು ವಚನಗಳು ಪ್ರಕಟವಾಗಿರುವುದರಿಂದ ಜೇಡರ ದಾಸೀಮಯ್ಯಾ ಬಸವಣ್ಣನವರ (ಹಿರಿಯ) ಸಮಕಾಲೀನರು ಎಂಬ ನಿರ್ಧಾರಕ್ಕೆ ಬಂದಿದೆ. ಡೋಹರ ಕಕ್ಕಯ್ಯನವರನ್ನು ನೆನೆಯುವ ಜೇಡರ ದಾಸೀಮಯ್ಯನ ವಚನವನ್ನು ಉದಾಹರಿಸಿ ನೀವು ಇದನ್ನು ಸಿದ್ಧಪಡಿಸಿದ್ದೀರಿ. ನಾನು ಹಿಂದೆ ವಚನ ಓದಿದ್ದೆ. ಆದರೆ ಅಷ್ಟು ಗಮನಿಸಿರಲಿಲ್ಲ. ಇಬ್ಬರೂ ಬೇರೆ ಬೇರೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಕೆಲ ಸಾಹಿತಿಗಳು ಉದ್ದೇಶ ಪೂರಕವಾಗಿ ಇಬ್ಬರೂ ಒಂದೇ ಎಂಬ ಸತ್ತು ಹೋಗಿದ್ದ ವಾದವನ್ನು ಪುನರ್‌ಜೀವನಗೊಳಿಸಲು ಪ್ರಯತ್ನಗೊಳಿಸುತ್ತಲಿದ್ದಾರೆ. (ಸಂಕ್ರಮಣ ಸಂಪುಟ 40 ಸಂಚಿಕೆ 06, ನವೆಂಬರ್-ಡಿಸೆಂಬರ್ 2005) ನಾನು ದುಗ್ಗಳೆಯ ಜನ್ಮಸ್ಥಳದ ಬಗ್ಗೆ ಸಂಶೋಧನೆ ಮಾಡಿ ಮುಗಿಸಿದ್ದೇನೆ. ಲೇಖನ ಬರೆದಿಲ್ಲ, ಬರೆದು ಪ್ರಕಟಿಸಿದ ನಂತರ ತಮ್ಮ ಗಮನಕ್ಕೆ ಕಳಿಸುತ್ತೇನೆ.

ಇತಿ ಶರಣು ಶರಣಾರ್ಥಿಗಳು

ಹೆಚ್.ಚಂದ್ರಶೇಖರ

ಕಲ್ಯಾಣ ಕಿರಣ ಆಜೀವ ಸದಸ್ಯರಲ್ಲಿ ಹೃತ್ಪೂರ್ವಕ ವಿನಂತಿ

ಕಲ್ಯಾಣ ಕಿರಣವು 1970ರಲ್ಲಿ ಪ್ರಾರಂಭವಾದಾಗ ವಾರ್ಷಿಕ ಚಂದಾ 10ರೂ, ಆಜೀವ ಸದಸ್ಯತ್ವ 100 ರೂ ಇದ್ದಿತು. 36 ವರ್ಷಗಳ ಕಾಲ ನಿರಂತರ ವಾಗಿ ಕಲ್ಯಾಣ ಕಿರಣವನ್ನು ಕಳಿಸುತ್ತಿರುವುದು ಯಾರಿಗಾದರು ಹಾಸ್ಯಾಸ್ಪದ ಎನಿಸುವುದು. ಆದರೆ ಇದನ್ನು ಜ್ಞಾನ ದಾಸೋಹದ ಒಂದು ಅಂಗವೆಂದು ನಾವು ಕಳಿಸುತ್ತಿದ್ದೇವಾದರೂ, ನಿರಂತರವಾಗಿ ಕಲ್ಯಾಣ ಕಿರಣವನ್ನು ಪಡೆಯುತ್ತಿರುವ ಆಜೀವ ಸದಸ್ಯರು ತಮ್ಮ ಕರ್ತವ್ಯದ ಬಗ್ಗೆ ಆಲೋಚಿಸಬೇಕು. ಈಗ ಆಜೀವ ಸದಸ್ಯತ್ವ 600 ರೂ ಇದೆ. ಆದ್ದರಿಂದ ತಾವು ಮೊದಲು ಕಟ್ಟಿದ್ದ ಹಣಕ್ಕಿಂತ ಹೆಚ್ಚಿನ ಹಣವನ್ನು ಕಲ್ಯಾಣ ಕಿರಣದ ಆಜೀವ ಸದಸ್ಯತ್ವಕ್ಕೆ ಕಟ್ಟಬೇಕೆಂದು ವಿನಂತಿಸುತ್ತೇವೆ.

ಬೆಂಗಳೂರಿನಿಂದ ಏಕಾಂಬರ ಗೌಡ ರವರು ಮೊದಲು ಆಜೀವ ಸದಸ್ಯರಾಗಿದ್ದರೂ ಸಹ ಪುನಃ 600 ರೂಗಳನ್ನು ಕಲ್ಯಾಣ ಕಿರಣಕ್ಕೆ ಕಟ್ಟಿ ಆದರ್ಶವನ್ನು ಮೆರೆದಿದ್ದಾರೆ. ಅದೇ ರೀತಿ ಇನ್ನಿತರ ಸದಸ್ಯರು ಸಹ ಸಹಕರಿಸ ಬೇಕಾಗಿ ಕೋರುತ್ತೇವೆ.

- ಸಂಪಾದಕರು, ಕಲ್ಯಾಣ ಕಿರಣ

ಗುರು ಚರಣಕೆ ನುಡಿ ನಮನ

ಪುರಾಣ ಕೇಳುವುದ ಬಿಡಿಸಿ ಪ್ರವಚನ ಕೇಳುವಂತೆ ಮಾಡಿದ ಮಾತಾಜಿ
ಗುಡಿ ಗುಂಡಾರವ ಬಿಡಿಸಿ ಬಸವ ಮಂಟಪಕ್ಕೆ ಹೋಗುವಂತೆ ಮಾಡಿದ ಮಾತಾಜಿ
ಸ್ಥಾವರ ಲಿಂಗ ಪೂಜೆಯ ಬಿಡಿಸಿ ಇಷ್ಟಲಿಂಗವ ಪೂಜಿಸಲು ಕಲಿಸಿದ ಮಾತಾಜಿ
ಅನ್ಯದೇವರ ಸಂಗವ ಬಿಡಿಸಿ ಲಿಂಗದೇವನ ಸಂಗ ದೊರಕಿಸಿ ಕೊಟ್ಟ ಮಾತಾಜಿ
ತೀರ್ಥ ಕ್ಷೇತ್ರಕ್ಕೆ ಹೋಗುವುದ ಬಿಡಿಸಿ ಧರ್ಮ ಕ್ಷೇತ್ರಕ್ಕೆ ಬಾ ಎಂದ ಮಾತಾಜಿ
ಜಾತ್ರೆ ಮಾಡುವುದ ಬಿಡಿಸಿ ಶರಣ ಮೇಳ, ಕಲ್ಯಾಣ ಪರ್ವಕ್ಕೆ ಬಾ ಎಂದ ಮಾತಾಜಿ
ನಮಸ್ಕಾರ ಬನ್ನಿ ಎಂಬುದ ಬಿಡಿಸಿ ಶರಣು ಬನ್ನಿ ಎಂದು ಕಲಿಸಿದ ಮಾತಾಜಿ
ನಮಸ್ಕಾರ ಹೋಗಿ ಬನ್ನಿ ಎನ್ನುವುದ ಬಿಡಿಸಿ ಶರಣು ಶರಣಾರ್ಥಿ ಹೋಗಿ ಬನ್ನಿ ಎನ್ನಲು ಹೇಳಿದ ಮಾತಾಜಿ
ಟಾ ಟಾ ಎನುವುದು ಬಿಡಿಸಿ ಜೈ ಜೈ ಎನ್ನಲು ಹೇಳಿದ ಮಾತಾಜಿ
ಊಟ ಎನುವುದ ಬಿಡಿಸಿ ಪ್ರಸಾದ ಸ್ವೀಕರಿಸಿ ಎನ್ನಲು ತಿಳಿಸಿದ ಮಾತಾಜಿ
ಅನ್ಯ ಸಾಹಿತ್ಯದ ಹಂಗನು ಬಿಡಿಸಿ ವಚನ ಸಾಹಿತ್ಯದ ಕಡೆಗೆ ಮನ ಒಲಿಸಿದ ಮಾತಾಜಿ
ಓಂ ನಮಃ ಶಿವಾಯ ಮಂತ್ರದ ಬದಲು ಓಂ ಲಿಂಗಾಯ ನಮಃ ಮಂತ್ರವ ತಿಳಿಸಿದ ಮಾತಾಜಿ
ಕೂಡಲ ಸಂಗಮ ದೇವಾ ಎನ್ನುವ ನಾಮಾಂಕಿತದ ಬದಲು ಲಿಂಗದೇವಾ ಎಂದೆನ್ನಲು ತಿಳಿಸಿದ ಮಾತಾಜಿ
ಜಗದ ಗುರುಗಳನ್ನು ತೋರಿಸಿ ಗುರು ಬಸವೇಶ್ವರರ ಗುರುವಾಗಿಸಿದ ಮಾತಾಜಿ
ಅನ್ಯ ವ್ರತಗಳ ಬಿಡಿಸಿ ಗುರು ಬಸವೇಶ್ವರರ ವ್ರತ ಕೈಗೊಳ್ಳಲು ಹೇಳಿದ ಮಾತಾಜಿ
ನಾಗಪ್ಪ- ಗಣಪತಿ ಬದಲು ಶರಣರ ಜಯಂತಿ, ಶರಣರ ಸ್ಮರಣೋತ್ಸವ ಮಾಡುವಂತೆ ಹೇಳಿದ ಮಾತಾಜಿ
ಚಿತ್ರಗೀತೆಯ ಹಾಡುವುದ ಬಿಡಿಸಿ ವಚನ ಗಾಯನ ಮಾಡಿ ಎಂದ ಮಾತಾಜಿ
ಕುಂಕುಮ ಬಂಡಾರ ಹಚ್ಚದೆ ವಿಭೂತಿ ಧರಿಸಿರೆಂದು ಹೇಳಿದ ಮಾತಾಜಿ
ಕರಿ ದಾರ ತಾಯತ ಕಿತ್ತೊಗೆದು ರುದ್ರಾಕ್ಷಿಯ ಕಟ್ಟಿದ ಮಾತಾಜಿ
ವೈಭವ ಜೀವನ ನಡೆಸದೆ ಸರಳ ಜೀವನ ಕಲಿಸಿದ ಮಾತಾಜಿ
ಭಜನೆ ಮಾಡುವುದ ಬಿಡಿಸಿ ಪ್ರಾರ್ಥನೆ ಮಾಡಲು ಪ್ರೇರೇಪಿಸಿದ ಮಾತಾಜಿ ದುಂದು ವೆಚ್ಚ ಮಾಡುವ ಬದಲು ದಾಸೋಹ ಮಾಡುವಂತೆ ತಿಳಿಸಿದ ಮಾತಾಜಿ
ಇಂತಿ ಎಲ್ಲವನು ಬಿಡಿಸಿ ಲಿಂಗದೇವರನು ಎನ್ನ ಕರಸ್ಥಲದಲ್ಲಿ ನೆಲೆ ಗೊಳಿಸಿದ ನನ್ನ ದೀಕ್ಷಾಗುರು ಮಾತಾಜಿಯವರ ಚರಣ ಕಮಲಕ್ಕೆ ನಮೋ ನಮೋ ನಮೋ ಎನ್ನುತಿರ್ದೆನು ಬಸವ ಪ್ರಿಯ ಲಿಂಗದೇವಾ.

- ಶರಣ.ಮಂಜುನಾಥ.ಜಿ.ಅಂಗಡಿ,
ಧಾರವಾಡ

ಕಲ್ಯಾಣ ಕಿರಣ ಓದುಗ ಅಭಿಮಾನಿಗಳಿಗೆ ವಿಶೇಷ ಸೂಚನೆ

ನಿಮ್ಮ ನೆಚ್ಚಿನವರಿಗೆ ಏನಾದರೂ ಕೊಡುಗೆಯನ್ನು ನೀಡಬೇಕು ಎಂದು ಎನಿಸಿದ್ದರೆ ನಿಮ್ಮ ಸಹಾಯಕ್ಕೆ ಕಲ್ಯಾಣ ಕಿರಣ ಮತ್ತು ಬಸವ ಕಿರಣ ಪತ್ರಿಕೆಗಳ ಸಿಬ್ಬಂದಿ ವರ್ಗ ಮುಂದಾಗಿದೆ. ನೀವು ಸೂಚಿಸುವ ಆತ್ಮೀಯರಿಗೆ, ನೀವು ತಿಳಿಸುವ ಅವಧಿಯವರೆಗೆ ಪತ್ರಿಕೆಗಳನ್ನು ಕಳಿಸುತ್ತಿದ್ದೇವೆ. ನಿಮ್ಮ ಆತ್ಮೀಯರಿಗೆ ನಿಮ್ಮ ಶುಭಾಶಯ ಪತ್ರದ ಮುಖೇನ ತಿಳಿಸುತ್ತಿದ್ದೇವೆ.
ತ್ವರೆ ಮಾಡಿರಿ!!! ನಿಮ್ಮ ಹಾಗೂ ನಿಮ್ಮ ಆತ್ಮೀಯರ ಪೂರ್ಣ ವಿಳಾಸವನ್ನು ಹಾಗೂ ಚಂದಾ ಹಣವನ್ನು ನಮ್ಮ ಕಾರ್ಯಾಲಯಕ್ಕೆ ಕಳುಹಿಸಿರಿ.

ಗುರು ಮಾತೆ

ಗುರು ಮಾತೆ ಶರಣು ಗುರು ಮಾತೆ
ಶರಣೆಂಬೆ ನಾವು ಗುರು ಮಾತೆ
ಚಿನ್ಮಲಾದ್ರಿಯ ಚಿತ್ಕಳೆಯೆ
ಶರಣರ ಹೃದಯದ ಅರಗಿಣಿಯೆ
ಬಸವ ತಂದೆಯ ಚಿತ್ಪ್ರಭೆಯೆ
ಬಸವಾತ್ಮಜೆಯೆ ಶರಣೆಂಬೆ ॥ 1 ॥

ಅಮೂಲ್ಯ ನಿಧಿಯೆ ಗುರು ಮಾತೆ
ಅಪೂರ್ವ ವಾಙ್ಮಿ ಗುರು ಮಾತೆ
ಸಾಹಿತ್ಯ ವಾಹಿನಿ ಗುರು ಮಾತೆ
ಮುಕ್ತ ತರಂಗಿಣಿ ಗುರು ಮಾತೆ ॥ 2 ॥

ಶರಣ ಮೇಳ ರೂಹಾರಿ ಗುರು ಮಾತೆ
ಗಣ ಮೇಳ ರೂಹಾರಿ ಗುರು ಮಾತೆ
ಕಲ್ಯಾಣ ಪರ್ವ ನಿಧಿ ಗುರು ಮಾತೆ
ವಿಶ್ವಧರ್ಮ ಪ್ರಚಾರಕಿ ಗುರು ಮಾತೆ ॥ 3 ॥

ಬಸವ ದರ್ಶಕಿ ಗುರು ಮಾತೆ
ಲಿಂಗದೇವ ಅನ್ವೇಷಕಿ ಗುರು ಮಾತೆ
ಪ್ರವಚನ ಪರಿಣತೆ ಗುರು ಮಾತೆ
ತ್ರಾಟಕ ಯೋಗಿಣಿ ಪ್ರಿಯ ಮಾತೆ ॥ 4 ॥

ಅನುಭವ ಮೇರುವೆ ಗುರು ಮಾತೆ
ಅರಿವಿನ ಮಾಣಿಕ್ಯ ಗುರು ಮಾತೆ
ಸದ್ಗುಣ ನಿಧಿ ನೀವು ಗುರು ಮಾತೆ
ಬಸವ ಗಣ ವಂದಿತೆ ಗುರುಮಾತೆ ॥ 5 ॥

ವೀರ ವಿರಾಗಿಣಿ ಗುರು ಮಾತೆ
ಅಕ್ಕನ ಅವತಾರಿ ಗುರು ಮಾತೆ
ಸ್ತ್ರೀ ಕುಲೋದ್ಧಾರಕಿ ಗುರು ಮಾತೆ
ಸ್ತ್ರೀ ಶಕ್ತಿ ದಾತೆ ಗುರು ಮಾತೆ ॥ 6 ॥

ವೀರ ಯೋಗಿಣಿ ಗುರು ಮಾತೆ
ದಿವ್ಯ ವ್ಯಕ್ತಿತ್ವದ ಗುರು ಮಾತೆ
ಅಪೂರ್ವ ಸಾಹಿತಿ ಗುರು ಮಾತೆ
ಕೆಚ್ಚೆದೆ ಕಲಿ ನೀ ಗುರು ಮಾತೆ ॥ 7 ॥

ಮಾತೃ ಸ್ವರೂಪಿಣಿ ಗುರು ಮಾತೆ
ಪಿತೃ ಸ್ವರೂಪಿಣಿ ಗುರು ಮಾತೆ
ಬಂಧು ಸ್ವರೂಪಿಣಿ ಗುರು ಮಾತೆ
ಭಾಗ್ಯವಿಧಾತೆ ಗುರ ಮಾತೆ ॥ 8 ॥

ಅಷ್ಟಾವರಣ ಶೋಭಿತೆ ಗುರು ಮಾತೆ
ಲಿಂಗದೇವ ಪ್ರೀತೆ ಗುರು ಮಾತೆ
ಬಸವಾ ಸಂಜಾತೆ ನೀ ಗುರು ಮಾತೆ
ಬಸವಾತ್ಮಜೆಯೆ ಶರಣೆಂಬೆ ॥ 9 ॥

ಜಂಗಮ ಜ್ಯೋತಿಯೆ ಗುರು ಮಾತೆ
ಸುಜ್ಞಾನ ಚಿಲುಮೆಯೆ ಗುರು ಮಾತೆ
ಅಪೂರ್ವ ಚಿಂತಕಿ ಗುರು ಮಾತೆ
ವಚನಾಮೃತ ಪ್ರಿಯೆ ಗುರು ಮಾತೆ ॥ 10 ॥

ಸ್ತ್ರೀ ಕುಲದ ಕಣ್ಮಣಿ ಗುರುಮಾತೆ
ಅಧ್ಯಾತ್ಮ ಅರಗಿಣಿ ಗುರು ಮಾತೆ
ಸಾಹಿತ್ಯ ಶಿರೋಮಣಿ ಗುರು ಮಾತೆ
ಗುರು ಬಸವ ಕಣ್ಮಣಿ ಗುರು ಮಾತೆ ॥ 11 ॥

ಗುರು ಲಿಂಗಾನಂದರ ಕರ ಸಂಜಾತೆ
ಜಗದ್ಗುರು ಪೀಠವ ಏರಿದ ಮಾತೆ
ಸಚ್ಚಿದಾನಂದ ಪ್ರಿಯೆ ಮಾತೆಯೇ
ನಿಮ್ಮ ಚರಣಕೆ ಮಣಿದು ಶರಣೆಂಬೆ ॥ 12 ॥

ಶಾರದ ಬಸವರಾಜು
ರಾ.ಬ.ದ. ಭದ್ರಾವತಿ

ವಚನ ಕಿರಣ

ಭಕ್ತನಾದಡೆ ಬಸವಣ್ಣನಂತಾಗಬೇಕು
ಜಂಗಮವಾದಡೆ ಪ್ರಭುದೇವರಂತಾಗಬೇಕು
ಯೋಗಿಯಾದಡೆ ಸಿದ್ಧರಾಮಯ್ಯನಂತಾಗಬೇಕು
ಭೋಗಿಯಾದಡೆ ಚನ್ನಬಸವಣ್ಣನಂತಾಗಬೇಕು
ಇಂತಿವರ ಕಾರುಣ್ಯ ಪ್ರಸಾದವ ಕೊಂಡು
ಸತ್ತ ಹಾಗಿರಬೇಕಲ್ಲದೆ ತತ್ತ್ವದ ಮಾತು ಎನಗೇಕಯ್ಯ.
ದಾಸಯ್ಯ ಪ್ರಿಯ ರಾಮನಾಥ ?

- ವ.701, ಪು.229, ಸಂ.5

ಮಹಾ ಗುರುವೆ ಪೂಜ್ಯ ಮಾತಾಜಿ

ವಿಶ್ವಗುರುವೆ ನಿಮ್ಮ ಹೆಸರಿನಲ್ಲಿ ಪೀಠವನ್ನು ಸಂಸ್ಥಾಪಿಸಿ
ಬಸವ ದಳಗಳ, ಬಸವ ಮಂಟಪಗಳ ಬಹುವಾಗಿ ಬೆಳಸಿ
ಸಮುದಾಯ ಋಣವ ತೀರಿಸಿ
ಕೃತಾರ್ಥರಾದರು ವಚನ ವಿಜ್ಞಾನಿ ಮಾತಾಜಿ.

ಹೆಣ್ಣು ಹೆಣ್ಣಲ್ಲ, ಹೆಣ್ಣು ಪುರುಷನಿಗೆ ಸಮಾನಳೆಂಬ ತಮ್ಮ ಆಶೆಯಂತೆ
ಇನ್ನಾವ ಧರ್ಮದಲ್ಲಿ ಇರದ ಸೊಬಗ
ಬಸವ ಧರ್ಮಕೆ ತಂದು ಕೊಟ್ಟರು ತಮ್ಮ ಸುಪುತ್ರಿ
ಪ್ರಥಮ ಮಹಿಳಾ ಜಗದ್ಗುರುವಾಗಿ.

ಅಪ್ಪಾ, ಸರ್ವರನು ಸೇರಿಸಲು ಶರಣ ಮೇಳವನ್ನು ಸಂಯೋಜಿಸಿ
21ನೇ ಶತಮಾನದಲ್ಲೂ 12ನೇ ಶತಮಾನವನ್ನು
ಪರಿಚಯಿಸಲು ಕಲ್ಯಾಣ ಪರ್ವ ಹುಟ್ಟು ಹಾಕಿದರು.
ಕಾಯಕವೇ ಕೈಲಾಸವೆಂದ ಬಸವ ಕಲ್ಯಾಣದಲಿ
ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರ ಋಣವ ತೀರಿಸಲು
ಮಹಾರಾಷ್ಟ್ರದ ಲಿಂಗಾಯತರ ಸಂಘಟನೆಗಾಗಿ
ಅಲ್ಲಮ ಪ್ರಭುಗಿರಿಯಲಿ ಲಿಂಗಾಯತ ಗಣ ಮೇಳ ಮಾಡಿಹರು
ಸಚ್ಚಿದಾನಂದ ಪ್ರಿಯೆ ಮಾತಾಜಿ

ದಲಿತೋದ್ಧಾರಕ ಬಸವರೆ ನಿಮಗಾಗಿ ಆಕಾಶ, ಭೂಮಿಗಳ
ಒಂದು ಮಾಡಿ ನಿಂತು ಮಾತಾಜಿ-ನಿಮ್ಮ ಶುಭಾಶೀರ್ವಾದವಿರಲು
ನ್ಯಾಯ, ನಿಷ್ಠುರಿಯಾಗಿ ಬಸವ ಬದ್ಧರಾಗಿ ನಿಂತ ನಿಲುವುಗಳು
ಎಲ್ಲರನ್ನು ಹುಬ್ಬೇರಿಸಿವೆ, ನಿಬ್ಬೆರಗಾಗಿಸಿವೆ!

ಧರ್ಮವೆಂದರೆ ಆಚರಣೆಗಳೆಂದು
ನಿತ್ಯದ ಕೌಟುಂಬಿಕ ಪ್ರಾರ್ಥನೆ ನೆನಹು
ವಾರದ ಸಾಮೂಹಿಕ ಪ್ರಾರ್ಥನೆ ಶರಣ ಸಂಗಮ
ಸ್ಥಳೀಯ ಗಣಮೇಳ ಜಾಗತಿಕ ಶರಣ ಮೇಳ,
ಕಲ್ಯಾಣ ಪರ್ವ, ಅಲ್ಲಮ ಪ್ರಭು ಗಿರಿಯ ಗಣಮೇಳ

ಗುರು ಬಸವರ ಕಾಲಾವಧಿಯನ್ನು ತೆರೆದಿಟ್ಟು
ಅವರ ಭವ್ಯ ವಿರಾಟ ರೂಪದರ್ಶಿಸಿ
ಲಿಂಗೈಕ್ಯ 1196(ಶ್ರಾವಣದ -ಬಸವ) ಪಂಚಮಿ ಎಂದು
ಕಾಲಜ್ಞಾನ ವಚನಾಧಾರಗಳಿಂದ ಕಾಲ ನಿರ್ಣಯಗೈದು
ಬಸವ ಶಕೆ ಪ್ರಾರಂಭಿಸಿದ ಪರಮ ಬಸವ ಭಕ್ತೆ ಮತಾಜಿ
ಇತಿಹಾಸ ಬರೆಯುತಿದೆ-ಬಸವಾತ್ಮಜೆಯ
ಬಸವ (ಪರಿಪೂರ್ಣ) ಬದುಕನು
ಎಲ್ಲರಿಗೂ ಮಾರ್ಗದರ್ಶನಾಗಲೆಂದು
ಹೇ ತಂದೆಯೆ, ನೀವು ತೋರಿದ ಪಥದಲಿ
ಪ್ರೀತಿಯ ಪುಟ್ಟಪುಟ್ಟ ಹೆಜ್ಜೆಗಳನಿಟ್ಟು

ನಿಮ್ಮ (ಬಸವ ಗುರುವಿನ) ಹೃದಯ ಗಹ್ವರಹೊಕ್ಕು ಮುಂದೆ, ಮುಂದೆ,
ಬಹು ಮುಂದೆ ಸಾಗುತ್ತಿದ್ದಾರೆ ಪೂಜ್ಯ ಮಾತಾಜಿ.

ಧರ್ಮವನು ಕೊಟ್ಟು ನೀವು ಲಿಂಗ ದೇವರಿಗೆ ಎಡೆಯಾದಿರಿ ಬಸವ ಗುರುವೆ
ಧರ್ಮದ ಚೌಕಟ್ಟು ಕೊಟ್ಟು ನಿಮಗೆ ಎಡೆಯಾದರು ಮಾತಾಜಿ
ಇಷ್ಟೆಲ್ಲಾ ಸಾಧಿಸಿ ತೋರಿದ ತಮ್ಮ ಪುತ್ರಿಯೇ
ವಾರಸುದಾರಳೆಂದು ಆರಿಸಿದಿರಲ್ಲಾ ಧರ್ಮ ಪ್ರಚಾರಕೆ
ತಮ್ಮ ನಂತರದ ಸ್ಥಾನಕೆ!
ಬಸವ ಯುಗದ ಮರು ನಿರ್ಮಾಣಕೆ!

ಆರು ಹತ್ತುಗಳನ್ನು ದಾಟಿದ ಪೂಜ್ಯ ಮಾತಾಜಿ
ಬಸವ (ಶುಭದಾಯಕ) ಬದುಕನು
10 ಹತ್ತು ವರುಷಗಳ ದಾಟಲೆಂದು ಪ್ರಾರ್ಥಿಸಿ
ಬಸವ ಗುರುವಿನ ಋಣವ ತೀರಿಸಲು ಸಾಧ್ಯವಾಗದ
ಈ ಸಮುದಾಯಕ-ಸಾಮೂಹಿಕ ಋಣ ತೀರಿಸಲು
ಆರು ಶಕ್ತಿಗಳು ಏಕಾಗಿ ನೀವೊಬ್ಬರೇನೋ ಎನ್ನುವಂತಹ
ನಿಮ್ಮನ್ನು ನೀವೇ ಅರ್ಪಿಸಿಕೊಂಡು ಮುಂದಾಗಿ
ಎಡೆಯಾಗಿರುವುದಕ್ಕೆ ಹೃದಯ ತುಂಬಿ ಶರಣಾರ್ಥಿಗಳು
ಎಲೆ ತಾಯಿ, ಅನಂತ ಶರಣು ಶರಣಾರ್ಥಿಗಳು.

-ಕೆ.ಬಸವರಾಜು
ಆಡಳಿತ ಅಧಿಕಾರಿಗಳು, ಎಲ್.ಐ.ಸಿ,
ಅಧ್ಯಕ್ಷರು, ರಾ.ಬ.ದಳ, ಬೆಳಗಾವಿ

ಬಸವ ಲಿಂಗ

ಬಸವ ಬಸವ ಬಸವಲಿಂಗ
ಬಸವಲಿಂಗ ಮಂತ್ರ ಪರುಷಯ್ಯಾ

ಪಂಚಾಕ್ಷರ ಪಂಚೇಂದ್ರಿಯಗಳಿಗೆ
ಪಂಚಾಮೃತದಯ್ಯ ಅಯ್ಯ ಬಸವ ಲಿಂಗ ಮಂತ್ರ ॥1॥

ಭಕ್ತಿಗೆ ಮೂಲ ಶಕ್ತಿಗೆ ಮೂಲ
ಮುಕ್ತಿಗೆ ಸೋಪಾನವಯ್ಯ ಅಯ್ಯ।
ಮೂಲಕ್ಕೆ ಮೂಲ ಮೂಲವಯ್ಯ
ಬಸವ ಲಿಂಗ ಮಂತ್ರ ಮಹಾಮಂತ್ರ ॥2॥

ಭಕ್ತಿಯ ಭೂಮಿಯೋಳ್ ಬಸವ ಮಂತ್ರ ಬಿತ್ತಿ
ಆಚಾರವೆಂಬ ಜಲವನ್ನೆರೆದು
ದುರ್ಭಾವವೆಂಬ ಕಳೆಯನ್ನು ಕಿತ್ತಿ
ಅಂಗಗುಣವಳಿದು ಲಿಂಗಾಂಗಿಗಳಾದರಯ್ಯ ॥3॥

ಬಸವಲಿಂಗ ಪಂಚಾಕ್ಷರ ಮನದಲ್ಲಿ
ನಿಂದಡೆ ಕಳೆಯುವುದಯ್ಯ ಭವಪಾಶ
ಪಂಚಾಕ್ಷರವ ನೆನೆದು ಪಂಚಭೂತವಂ ಬೆರೆತು
ಬಯಲಲ್ಲಿ ಬಯಲಾದರಯ್ಯ ಬಸವಾದಿ
ಪ್ರಮಥರು ॥4॥

ಮರೆಯದಿರು ತೊರೆಯದಿರು
ಎಲೆ ಮನವೆ ಮಹಾಮಂತ್ರ
ಬಸವ ಬಸವ ಬಸವಲಿಂಗ ಬಸವನ
ನೆನೆದು ನಿತ್ಯಾನಂದ ಪ್ರಭುವಿಳೊಳಗೆ
ನೆನೆ ಮನವೆ ॥5॥

-ಕೆ.ಎಂ.ಪ್ರಭು ಲಿಂಗಾಯತ್
ರಾಷ್ಟ್ರೀಯ ಬಸವ ದಳ

ಜೇಡರ / ದೇವರ ದಾಸಿಮಯ್ಯ - ಬೇರೆ ಬೇರೆ

ರಾಜ್ಯದ ಉಪ ಮುಖ್ಯಮಂತ್ರಿ ಹಾಗೂ ಅರ್ಥಸಚಿವರಾದ ಬಿ.ಎಸ್.ಯಡಿಯೂರಪ್ಪನವರು ಈ ಸಾಲಿನ ಬಡ್ಜೆಟ್ ಮಂಡಿಸುವಾಗ ಹಂಪಿ ಕನ್ನಡ ವಿ.ವಿ.ಯೊಂದನ್ನು ಸ್ಥಾಪಿಸುವುದಾಗಿ ಘೋಷಿಸಿದಾಗಿನಿಂದ ಈ ನಾಮ ಕರಣದ ಬಗ್ಗೆ ವಿದ್ವತ್ ವಲಯದಲ್ಲಿ ವಿಫಲ ಚರ್ಚೆ ಆರಂಭವಾಗಿದೆ. ಇದು "ಜೇಡರ ದಾಸಿಮಯ್ಯ ಪೀಠ" ಎಂದಿರಬೇಕೆಂದು ಅನೇಕರು ಮತ್ತು "ದೇವರದಾಸಿಮಯ್ಯ" ಎಂಬುದೇ ಸರಿ ಎಂದು ಹಲವರೂ ತಮ್ಮ ವಾದಗಳನ್ನು ಮಂಡಿಸಿದ್ದಾರೆ.

ಇದೀಗ ಬಸವಧರ್ಮಪೀಠದ ಅಧ್ಯಕ್ಷರಾದ "ಜಗದ್ಗುರು ಮಾತೆ ಮಹಾದೇವಿಯವರು" "ಜೇಡರ ದಾಸಯ್ಯನ ವಚನಗಳು" ಎಂಬ ಕಿರು ಹೊತ್ತಿಗೆಯನ್ನು ತಮ್ಮ ವಿಶ್ವಕಲ್ಯಾಣ ಮಿಷನ್‌ನಿಂದ ಪ್ರಕಟಿಸಿದ್ದಾರೆ. ಇದರಲ್ಲಿ 177 "ರಾಮನಾಥ" ಅಂಕಿತದ ವಚನಗಳು ಸಂಗ್ರಹಿತವಾಗಿವೆ. ಈ ಗ್ರಂಥಕ್ಕೆ ಬರೆದಿರುವ ಮುನ್ನುಡಿಯಲ್ಲಿ ಮಾತಾಜಿಯವರು ದೇವರ ದಾಸಿಮಯ್ಯ / ಜೇಡರ ದಾಸಿಮಯ್ಯ - ಹೆಸರುಗಳ ಬಗ್ಗೆ ಉಂಟಾಗಿರುವ ಗೊಂದಲ ಬಗ್ಗೆ ಸುದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ.

ಇಬ್ಬರೋ ? ಎರಡು ಹೆಸರುಗಳೋ ?

ವಚನ ಸಾಹಿತ್ಯದಲ್ಲಿ ದಾಸಯ್ಯ, ದಾಸಿಮಯ್ಯ, ದಾಸಿಮಾರ್ಯ ಎಂಬ ಹೆಸರುಗಳು ಪ್ರಚಲಿತವಾಗಿವೆ. ಈ ಪೈಕಿ "ರಾಮನಾಥ ವಚನಾಂಕಿನ"ದ ಜೇಡರ ದಾಸಿಮಯ್ಯ ಸುಪ್ರಸಿದ್ದನು. ಖ್ಯಾತ ಸಂಶೋಧಕರಾದ ಪ್ರೊ|| ಆರ್. ರಾಚಪ್ಪನವರು ಶಿವದಾಸಿಮಯ್ಯ, ಶಂಕರದಾಸಿಮಯ್ಯ, ವೀರಶಂಕರದಾಸಿಮಯ್ಯ, ದೇವರ ದಾಸಿಮಯ್ಯ ಮತ್ತು ಜೇಡರದಾಸಿಮಯ್ಯ ಎಂಬ ಐದು ಜನ ದಾಸಿಮಯ್ಯರನ್ನು ಗುರುತಿಸಿದ್ದಾರೆ. ಇವರಲ್ಲದೆ ಅನುಭವ ಮಂಟಪದಲ್ಲಿ ಮತ್ತೋರ್ವ "ದಾಸಿಮಯ್ಯ" ನೆಂಬ ಶರಣ ಇದ್ದುದ್ದಾಗಿಯೂ, ಅಕ್ಕಮಹಾದೇವಿ ಮೊದಲ ಬಾರಿಗೆ ಅನುಭವ ಮಂಟಪಕ್ಕೆ ಬಂದಾಗ ಇತರ ಶರಣರ ಜೊತೆಗೆ ಆತನನ್ನೂ ಕಂಡು ನಮಸ್ಕರಿಸಿದಳೆಂದು ಮಾತೆ ಮಹಾದೇವಿಯವರು ಅಕ್ಕನ ವಚನವೊಂದರ ಆಧಾರದಿಂದ ಗುರುತಿಸಿದ್ದಾರೆ. ಇದೇನೇ ಇದ್ದರೂ ಬಹುಶೃತರಾಗಿರುವವರು ಜೇಡರ ದಾಸಿಮಯ್ಯ ಮತ್ತು ದೇವರ ದಾಸಿಮಯ್ಯ ಎಂಬ ಎರಡು ಹೆಸರುಗಳೇ. ಇವರಲ್ಲಿ ದೇವರ ದಾಸಿಮಯ್ಯನವರು ದೇವಾಂಗ ಸಮಾಜದಲ್ಲಿ ಹುಟ್ಟಿದವರಾಗಿದ್ದು ಅದರಲ್ಲಿ ಅವರು ರೇಷ್ಮೆ ವಸ್ತ್ರಗಳನ್ನು ನೇಯುವ ವರ್ಗಕ್ಕೂ, ಜೇಡರ ದಾಸಿಮಯ್ಯನವರು ಹತ್ತಿ ಬಟ್ಟೆಗಳನ್ನು ನೇಯುವ ವರ್ಗಕ್ಕೂ ಸೇರಿದವರಾಗಿದ್ದರು. ಇಬ್ಬರೂ ಗುಲ್ಬರ್ಗ ಜಿಲ್ಲಾ ಸುರಪುರ ಸನಿಹದ ಮುದನೂರು ಗ್ರಾಮದ ವಾಸಿಗಳಾಗಿದ್ದರು. ಹೆಸರು ಮಾತ್ರ ಉಭಯ ಸಾಮಾನ್ಯವಾಗಿದ್ದರೂ ವ್ಯಕ್ತಿಗಳು ಮಾತ್ರ ಬೇರೆ ಬೇರೆ ಎಂದು ಮಾತಾಜಿಯವರು ಸ್ಪಷ್ಟ ಪಡಿಸಿದ್ದಾರೆ. ಅಷ್ಟೇ ಅಲ್ಲ ಅವರ ಜೀವಿತದ ಕಾಲವೂ ಬೇರೆ ಬೇರೆ ಎಂದು ಮಾತಾಜಿಯವರು ಆಧಾರ ಸಮೇತ ಸಾದರಪಡಿಸಿದ್ದಾರೆ. ದೇವರ ದಾಸಿಮಯ್ಯನು ಚಾಲುಕ್ಯ ದೊರೆ ಜಯಸಿಂಹನ ಪತ್ನಿಗೆ ಶೈವ ದೀಕ್ಷೆ ಕೊಟ್ಟಿದ್ದವರೆಂದು ಇತಿಹಾಸ ಹೇಳುತ್ತದೆ. ಜಯಸಿಂಹನ ಕಾಲ ಕ್ರಿ.ಶ. 1040 ಎಂದು ನಿರ್ಣಯವಾಗಿದೆ. ಆದ್ದರಿಂದ ದೇವರದಾಸಿಮಯ್ಯನವರು ಆ ಕಾಲದವರೇ ಎಂದು ನಿರ್ಣಯಿಸಬೇಕಾಗುತ್ತದೆ. ಅಂದರೆ ಆತನು ಬಸವ ಪೂರ್ವದ ಒಬ್ಬ ಶೈವ ಸಂಪ್ರದಾಯದ ಆಧ್ಯಾತ್ಮಿಕ ಪುರುಷನು ಆದರೆ ಜೇಡರ ದಾಸಿಮಯ್ಯನು ಶೈವದಿಂದ ದೂರವಾದ ಶರಣ ಸಂಪ್ರದಾಯದ (ಲಿಂಗಾಯತ) ಬಸವಣ್ಣನವರ ಹಿರಿಯ ಸಮಕಾಲೀನ ಎಂದು ಕನ್ನಡ ಸಾಹಿತ್ಯ ಚಿಂತಕಾರರಾದಿಯಾಗಿ ಎಲ್ಲರೂ ಒಪ್ಪಿದಾರೆ. ಆತನು ಸ್ವತಃ ವಚನಕಾರನಾಗಿದ್ದನು. ರಾಮನಾಥ ಆತನ ವಚನಾಂಕಿತ ಆದರೆ ದೇವರ ದಾಸಿಮಯ್ಯನು ರಚಿಸಿದೆಂಬ ವಚನ ಸಾಹಿತ್ಯದ ಯಾವ

ದಾಖಲೆಗಳೂ ಇಲ್ಲ. ಈ ಹಿಂದೆ ಈ ಬಗ್ಗೆ ವಿವೇಚನೆ ಮಾಡಿರುವ ಬಹುತೇಕರು ನಾಮಸಾಮ್ಯ, ಸ್ಥಳಸಾಮ್ಯಗಳನ್ನಷ್ಟೇ ಗಮನದಲ್ಲಿಟ್ಟುಕೊಂಡು ಅವರಕಾಲ, ಕೃತಿಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೇ ಇಬ್ಬರೂ ಒಂದೆ ಎಂಬ ಆತುರದ ನಿರ್ಣಯಕ್ಕೆ ಬಂದಿರುವುದೇ ಇಂದು ಸಮಸ್ಯೆಯಾಗಿ ಭುಗಿಲೆದ್ದಿದೆ ಎಂದು ಮಾತಾಜಿ ಅಭಿಪ್ರಾಯಪಡುತ್ತಾರೆ.

ಜೀವನ ವಿವರ :

ದೇವರದಾಸಿಮಯ್ಯ ಜನಿಸಿದ್ದು ಗುಲ್ಬರ್ಗ ಜಿಲ್ಲೆಯ ಮುದನೂರು ಗ್ರಾಮದಲ್ಲಿ ಆಗಿನ ಕಾಲಕಾಲಕ್ಕೆ ಅದು ಸುಪ್ರಸಿದ್ಧ ಶೈವ ಕ್ಷೇತ್ರವಾಗಿತ್ತು. ಈತನ ತಂದೆ-ತಾಯಿಗಳು ಶೈವ ದಂಪತಿಗಳಾದ ಕಾಮಯ್ಯ ಮತ್ತು ಶಂಕರಿ ಎಂಬುವರೆಂದೂ ಇವರ ಕುಲ ಕಸುಬಾದ ರೇಷ್ಮೆ ನೇಯ್ಗೆಯನ್ನೇ ದೇವರ ದಾಸಿಮಯ್ಯ ಮುಂದುವರಿಸಿದನೆಂದೂ, ವೃತ್ತಿಯಲ್ಲಿ ನೇಕಾರನಾಗಿದ್ದರೂ ಪ್ರವೃತ್ತಿಯಿಂದ ಆಧ್ಯಾತ್ಮಿಯಾಗಿದ್ದು, ಶಿವನ ಬಗ್ಗೆ ವೀರ ನಿಷ್ಠೆ ಹೊಂದಿದ ವೀರ ಶೈವನಾಗಿದ್ದನೆಂದೂ ಮಾತಾಜಿಯವರು ವಿವರಗಳನ್ನು ಸಂಗ್ರಹಿಸಿದ್ದಾರೆ. ಮಂಟಪದಲ್ಲೂ ಭಾಗಿಯಾಗಿಯಾಗಿದ್ದನೆಂಬುದಕ್ಕೆ ಈತನ ವಚನಗಳಲ್ಲಿ ಮಾದಾರ ಚನ್ನಯ್ಯ ಮತ್ತು ಡೋಹರಕಕ್ಕಯ್ಯನವರ ಹೆಸರುಗಳು ಪ್ರಸ್ತಾಪಗೊಂಡಿರುವ ನಿದರ್ಶನಗಳನ್ನು ಮಾತಾಜಿ ನೀಡಿದ್ದಾರೆ. ಇದಕ್ಕೆ ಪೂರಕವಾಗಿ ಜೇಡರ ದಾಸಿಮಯ್ಯನವರ ಪತ್ನಿ ದುಗ್ಗಳೆಯ ಎರಡು ವಚನಗಳಲ್ಲಿ ಬಸವಣ್ಣನಿಂದ ಗುರು ಪ್ರಸಾದಿಯಾದನು ಮತ್ತು ಭಕ್ತನಾದಡೆ ಬಸವಣ್ಣನಂತಾಗಬೇಕು. ಚನ್ನಬಸವಣ್ಣ ಪ್ರಭುದೇವರ, ಮರುಳ ಶಂಕರ ದೇವರು ಹಾಗೂ ಸಿದ್ಧರಾಮಯ್ಯಗಳನ್ನು ಸ್ಮರಿಸಿ ಇಂತಿವರ ಕಾರುಣ್ಯ ಪ್ರಸಾದವಕೊಂಡು ಸತ್ತಾಗಿರಬೇಕಲ್ಲದೆ, ತತ್ವದ ಮಾತು ಎನಗೇಕಯ್ಯಾ ದಾಸಯ್ಯ ಪ್ರಿಯ ರಾಮನಾಥ, ಎಂದಿರುವುದರಿಂದ ಈ ಪತಿ-ಪತ್ನಿಯರೀರ್ವರೂ ಅನುಭವ ಮಂಟಪದಲ್ಲಿ ಭಾಗಿಗಳಾಗಿರಲೇಬೇಕೆಂದೂ ನಿರ್ವಿವಾದವಾಗಿ ನಿರ್ಧರಿಸಬಹುದೆಂದೂ ಮಾತಾಜಿಯವರು ಅಭಿಪ್ರಾಯಪಡುತ್ತಾರೆ. ಇದು ಈ ವಿಷಯ ಕುರಿತು ಒಂದು ಹೊಸಬೆಳಕನ್ನು ಬೀರುತ್ತದೆ ಎಂದು ಹೇಳಬಹುದಾಗಿದೆ. ಹೀಗಾಗಿ ಜೇಡರ ದಾಸಿಮಯ್ಯನವರ ಜೀವಿತಕಾಲ ಅನುಭವ ಮಂಟಪ ಹಾಗೂ ಬಸವಣ್ಣನವರ ಕಾಲ ಆಚೀಚಿನದೇ ಅಂದರೆ 1160ರ ಹಿಂದು ಮುಂದಣದೋ ಎಂದು ಮಾತಾಜಿ ಸ್ಪಷ್ಟ ಪಡಿಸುತ್ತಾರೆ.

ಬಸವಣ್ಣನವರು ಉತ್ತಮ ಕುಲದಲ್ಲಿ ಹುಟ್ಟಿದೆನೆಂದು ಎಂಬ ಆರಂಭವಾಗುವ ವಚನದಲ್ಲಿ 'ದಾಸಯ್ಯ ಶಿವದಾನವನೆರೆಯ ನೋಡಯ್ಯಾ' ಎಂಬ ನುಡಿಯೂ ಇನ್ನೊಂದು ವಚನದಲ್ಲಿ "ಕಕ್ಕಯ್ಯನ ಮನೆಯಲು ಬೇಡಿದೆ. ಚನ್ನಯ್ಯನ ಮನೆಯಲು ಬೇಡಿದೆ. ದಾಸಯ್ಯನ ಮನೆಯಲು ಬೇಡಿದೆ. ಎಂದು ನುಡಿದಿರುವುದೂ ಬಸವಣ್ಣನವರು ದಾಸಯ್ಯನವರನ್ನು ನೆನೆದಿರುವುದು ಕಂಡು ಬರುತ್ತದೆ. ಆದರೆ ಇಲ್ಲಿ ದೇವರ ದಾಸಿಮಯ್ಯನೋ, ಜೇಡರ ದಾಸಿಮಯ್ಯನೋ ಎಂಬ ಸಂದೇಹಕ್ಕೆ ಆಸ್ಪದವಿದೆ. ಆದರೆ "ತೊತ್ತಿಂಗೆ ಬಲ್ಲಹನೊಲಿದೊಡೆ ಪದವಿಯ ಮಾಡದೆ ಮಾಣ್ಬನೆ?" ಅವನೆ, ಅಯ್ಯಾ?" ಎಂದು ಬಸವಣ್ಣನವರೇ ಆ ಸಂದೇಹವನ್ನು ನಿವಾರಿಸಿದ್ದಾರೆ.

ಅಂತೆಯೇ ದೇವರದಾಸಿಮಯ್ಯನವರು ದಿವ್ಯವಾದ ವಸ್ತುವೊಂದನ್ನು ಶಿವನಿಗೆ ಅರ್ಪಿಸಿ ಅವನಿಂದ "ತವನಿಧಿ , ಅಂದರೆ ಅಕ್ಷಯ ಪಾತ್ರೆ"ಯನ್ನು ಎಂದೂ "ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ!... ಹೇಳುತ್ತಾ ದಾಸ ವಸ್ತ್ರವ ಸೀಳಿದಂದದಿಂದ ಭಯ ಕಾಣಿರಣ್ಣಾ" ಎಂದಿರುವುದರಿಂದಲೂ ಮತ್ತು ದೇವರ ದಾಸಿಮಯ್ಯರು ವಿಭಿನ್ನ ವಿರು ಎಂದು ಸ್ಪಷ್ಟವಾಗುತ್ತದೆ.

ಸ್ಪಷ್ಟೀಕರಣ :

ಈ ನಾಮಕರಣದ ಮತ್ತು ಅಧ್ಯಯನ ಪೀಠ ನಿರ್ಮಾಣದ ಬಗ್ಗೆ ಎದ್ದ ಹಲವಾರು ಪರ-ವಿರೋಧ

ವಾದಗಳ ಬಗೆಗೂ ಮಾತಾಜಿಯವರು ತಮ್ಮದೇ ಆದ ಸ್ಪಷ್ಟೀಕರಣಗಳನ್ನು ನೀಡಿದ್ದಾರೆ. ಡಾ|| ಎಲ್. ಬಸವರಾಜು ರವರು ವಚನಕಾರರೇ ಅಲ್ಲದೆ ದೇವರ ದಾಸಿಮಯ್ಯನವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆಯಾಗಬೇಕೆಂಬ ವಾದವನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಇನ್ನೂ ದೇವಾಂಗ ಸಮಾಜದ ಹೆಸರಿನಲ್ಲಿ ದೇವರ ದಾಸಿಮಯ್ಯನ ಪರ ವಾದ ಹೂಡಿರುವ ಗುಳೇದ ಗುಡ್ಡದ ಬಸವರಾಜ ದೇವರೂ ಮತ್ತು ಬೆಂಗಳೂರಿನ ಪ್ರೊ|| ಕೆ.ಜಿ. ನಾಗರಾಜಪ್ಪ ಅಥವಾ ಜನಾಂಗಾಧಾರಿತವಾಗಿರದೆ ಸಾಹಿತ್ಯ ಮತ್ತು ಸಾಧನೆಯ ಆಧಾರವಾಗಿರುವುದರಿಂದ ಇಲ್ಲಿ ಜಾತಿ-ಜನಾಂಗದ ಪ್ರಶ್ನೆ ಬರಬಾರದು. ಅಷ್ಟಕ್ಕೂ ಈ ಹಿರಿಯರಿಬ್ಬರೂ ಒಂದೇ ಜನಾಂಗ, ಒಂದೇ ವೃತ್ತಿ - ಪ್ರವೃತ್ತಿಯವರು. ಆದರೆ ಕಾಲ ಬೇರೆ ಬೇರೆ. ಐತಿಹಾಸಿಕವಾಗಿ ದೇವರ ದಾಸಿಮಯ್ಯನವರು ಜೇಡರ ದಾಸಿಮಯ್ಯನವರಿಗಿಂತಲೂ ಕನಿಷ್ಟ ಒಂದು ನೂರು ವರ್ಷ (1040-1160)ಮುನ್ನಿನವರೆಂದು ಮನಗಾಣಿಸಿದ್ದಾರೆ. ದೇವರದಾಸಿಮಯ್ಯನವರು ಶೈವಧರ್ಮ - ವೀರಶೈವಧರ್ಮಗಳ ಬೋಧಕರೂ, ಪ್ರಚಾರಕರೂ (ಗುರುಪ್ರಾಯರು) ಆಗಿದ್ದವರು. ಅವರಿಗೆ ಅಪಾರವಾದ ಶಿಷ್ಯ ಬಳಗ ಇತ್ತೆಂದೂ ಅನೇಕ ಶಾಸನಗಳಿಂದ ಕಂಡು ಬಂದಿದೆ. ಕನ್ನಡ ಸಾಹಿತ್ಯ ಚರಿತ್ರೆಕಾರಾದ ತ.ಸು. ಶಾಮರಾಯರು ವಚನಕಾರ ಜೇಡರ ದಾಸಿಮಯ್ಯನ ಬಗೆಗೆ ಒಲವಿದ್ದರೂ ವಿವರಗಳ ಅಲಭ್ಯವಾದ ಕಾರಣದಿಂದಲೋ ಏನೋ ಇವರಿಬ್ಬರೂ ಒಂದೆ ಅಂದು ಬಿಟ್ಟಿದ್ದಾರೆ. ಜೇಡರ ದಾಸಿಮಯ್ಯ ಮತ್ತು ಆತನ ವಚನಗಳ ಬಗ್ಗೆ ಅಪಾರ ಕೃಷಿ ಮಾಡಿರುವ ಲಿಂ|| ಹೆಚ್. ದೇವಿರಪ್ಪನವರು ದೇವರದಾಸಿಮಯ್ಯನ ಹೆಸರಿನಲ್ಲಿ ಯಾವುದೇ ವಚನಗಳಾಗಲೀ, ಇತರೆ ಯಾವ ಮಾಹಿತಿಯೂ ಯಾವುದೇ ತಾಡೋಲೆ ಕಟ್ಟುಗಳಲ್ಲಿ ಲಭ್ಯವಿಲ್ಲ ಎಂದು ಹೇಳಿದ್ದಾರೆ.

ದೇವರದಾಸಿಮಯ್ಯನೇ ವಚನಕಾರ ದಾಸಿಮಯ್ಯ ಎಂದು ಭಾವಿಸಿ ಪೀಠ ಸ್ಥಾಪನೆ ಮಾಡುವುದು ಸತ್ಯಕ್ಕೆ ಅಪಚಾರವಾದಂತಾಗುತ್ತದೆ. ಪ್ರೊ|| ಚಿದಾನಂದ ಮೂರ್ತಿಯವರಾಗಲೀ ನಾನಾಗಲೀ ಪೀಠ ಸ್ಥಾಪನೆಗೆ ವಿರೋಧಿಗಳಲ್ಲ. ಆದರೆ ಸತ್ಯಕ್ಕೆ ಅಪಚಾರವಾಗಬಾರದೆಂದಿರುವ ಪ್ರೊ|| ಆರ್. ರಾಚಪ್ಪನವರ ಮಾತನ್ನು ಮಾತಾಜಿಯವರು ಸಂಪೂರ್ಣವಾಗಿ ಅನುಮೋದಿಸಿದ್ದಾರೆ.

ಇಬ್ಬರು ಚನ್ನಯ್ಯರೆ : ಈ ಗ್ರಂಥದಲ್ಲಿ ಮಾತಾಜಿಯವರು ಪ್ರಾಸಂಗಿಕವಾಗಿ ಶರಣ ಮಾದಾರ ಚನ್ನಯ್ಯನವರ ವೃತ್ತಾಂತವನ್ನು ಪ್ರಸ್ತಾಪಿಸಿದ್ದಾರೆ. ಪ್ರಚಲಿತವಿರುವ ಕಥನದಂತೆ ಚನ್ನಯ್ಯನ ಭಕ್ತಿಗೆ ಒಲಿದ ದೇವರು ಚೋಳರಾಜನ ಅರಮನೆಯ ಭಕ್ಷ್ಯಭೋಜ್ಯಗಳನ್ನು ಕಡೆಗಣಿಸಿ ಅಂಬಲಿಯ ಪ್ರಸಾದವನ್ನೇ ಸ್ವೀಕರಿಸುತ್ತಾನೆ. ಮುಂದೆ ಕಲಿಕಾಲ ಚೋಳನು ಅವನಿಗೆ ಶರಣಾಗುತ್ತಾನೆ. ಚಾರಿತ್ರಿಕವಾಗಿ ಚನ್ನಯ್ಯನು ಕಾಂಚೀಪುರದಲ್ಲಿ ರಾಜನ ಕುದುರೆ ಲಾಯದಲ್ಲಿ ಕಂಪಣಿಗನಾಗಿದಂದು. ಈ ತಮಿಳುನಾಡಿನ ದೊರೆಯ ಕಾಲ ಕ್ರಿ.ಶ. 1062 ರಿಂದ 1070. ಅಂದ ಮೇಲೆ ಕ್ರಿ.ಶ. 1160ರಲ್ಲಿ ಸ್ಥಾಪಿತವಾದ ಅನುಭವ ಮಂಟಪದಲ್ಲಿ ಇರುವುದು ಅಸಂಭವ ಅಲ್ಲಿದ್ದ ಚನ್ನಯ್ಯನೇ ಬೇರೆ ಇರಬೇಕು. ಆತನ ಮನೆಗೆ ದಾಸೋಹಕ್ಕೆಂದು ಹೋದ ಬಸವಣ್ಣನ ಪ್ರಸಂಗವೇ ಈ ರೂಪ ತಾಳಿರಬೇಕೆಂದು ಮಾತಾಜಿ ಊಹೆ ಮಾಡುತ್ತಾರೆ.

<u>ಮಾತಾಜಿ ನಿರ್ಣಯ</u>: ಈ ಗ್ರಂಥದ ಮೂಲಕ ಮಾತಾಜಿಯವರು ಜೇಡರ/ ದೇವರ ದಾಸಿಮಯ್ಯನವರ ಕುರಿತಾದ ಎಲ್ಲಾ ಸಂದೇಹಗಳನ್ನಲ್ಲದಿದ್ದರೂ ಕೆಲವನ್ನಾದರೂ ನಿವಾರಣೆ ಮಾಡಿದ್ದಾರೆ. 1928ರಲ್ಲಿ ಲಿಂ|| ಪ.ಗು. ಹಳಕಟ್ಟಿಯವರು ಪ್ರಕಟಿಸಿದವಚನಗಳಲ್ಲೂ, ಜ.ಚ.ನಿ.ಯವರ ದೇವರ ದಾಸಿಮಾರ್ಯ ಪ್ರಶಸ್ತಿಯಲ್ಲೂ, ಬಿ.ಎಸ್. ಸಣ್ಣಯ್ಯನವರ ಪ್ರಕಟಿಸಿರುವ ಗ್ರಂಥದಲ್ಲೂ, ಡಾ|| ಎಲ್. ಬಸವರಾಜರು 1970ರ ಸಂಗ್ರಹಕ್ಕೂ, ದೇವರದಾಸಿಮಯ್ಯನವರ ಹೆಸರೇ ಇದೆಯಾದರೂ ಅಲ್ಲೆಲ್ಲಾ ಇರುವುದು "ಜೇಡರ ದಾಸಿಮಯ್ಯನವರ ವಚನಗಳೇ. ಆದ್ದರಿಂದ ದೇವರ ದಾಸಿಮಯ್ಯ ಮತು ಜೇಡರ ದಾಸಿಮಯ್ಯ - ಇಬ್ಬರೂ ಒಂದೇ ಅಲ್ಲ, ಬೇರೆ ಬೇರೆ ಎಂಬುದಾಗಿ ಮಾತಾಜಿಯವರು ಈ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ.

- ಎ.ಜಿ.ವಿರುಪಾಕ್ಷಪ್ಪ, ದಾವಣಗೆರೆ,



ಓಂ ಶ್ರೀ ಗುರುಬಸವಲಿಂಗಾಯ ನಮಃ

866666



ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2007 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ತನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ ಪ್ರವಾಸ

ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2007ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 20ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾ ಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂ ಬಹುದು. 2007 ನೆಯ ಇಸವಿಯ 20 ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
01.	01-11-2006	ಚನ್ನ(ಬುಧ)ವಾರ	ವಿಜಯಪುರ
02.	02-11-2006	ಪ್ರಭು (ಗುರು)ವಾರ	ಸಾಸಲು
03.	03-11-2006	ಮಾತೃ(ಶುಕ್ರ)ವಾರ	ಹುಲ್ಲೇಕೆರೆ
04.	04-11-2006	ಶರಣ (ಶನಿ)ವಾರ	ತುರುವೇಕೆರೆ
05.	05-11-2006	ದೇವ(ರವಿ)ವಾರ	ಗುಡಿ ಗೊಂಡನಹಳ್ಳಿ

06.	06-11-2006	ಶಿವ(ಸೋಮ)ವಾರ	ಎಳನಾಡು
07.	07-11-2006	ಬಸವ(ಮಂಗಳ)ವಾರ	ತಮ್ಮಡಿಹಳ್ಳಿ
08.	08-11-2006	ಚನ್ನ(ಬುಧ)ವಾರ	ಚಿಕ್ಕಮಗಳೂರು ಜಿಲ್ಲೆ
09.	09-11-2006	ಪ್ರಭು(ಗುರು)ವಾರ	,,
10.	10-11-2006	ಮಾತೃ(ಶುಕ್ರ)ವಾರ	,,
11.	11-11-2006	ಶರಣ(ಶನಿ)ವಾರ	,,
12.	12-11-2006	ದೇವ(ಭಾನು)ವಾರ	ಭದ್ರಾವತಿ
13.	13-11-2006	ಶಿವ(ಸೋಮ)ವಾರ	,,
14.	14-11-2006	ಬಸವ(ಮಂಗಳ)ವಾರ	ಶಿವಮೊಗ್ಗ
15.	15-11-2006	ಚನ್ನ(ಬುಧ)ವಾರ	,,
16.	16-11-2006	ಪ್ರಭು(ಗುರು)ವಾರ	,,
17.	17-11-2006	ಮಾತೃ(ಶುಕ್ರ)ವಾರ	ದಾವಣಗೆರೆ
18.	18-11-2006	ಶರಣ(ಶನಿ)ವಾರ	ಚಿತ್ರದುರ್ಗ
19.	19-11-2006	ದೇವ(ಭಾನು)ವಾರ	ಹಿರಿಯೂರು
20.	20-11-2006	ಶಿವ(ಸೋಮ)ವಾರ	ದೊಡ್ಡಉಳಾರ್ತಿ
21.	21-11-2006	ಬಸವ(ಮಂಗಳ)ವಾರ	ಚಳ್ಳಕೆರೆ
22.	22-11-2006	ಚನ್ನ(ಬುಧ)ವಾರ	ಚಿತ್ರ ನಾಯಕನ ಹಳ್ಳಿ
23.	23-11-2006	ಪ್ರಭು(ಗುರು)ವಾರ	ಬಳ್ಳಾರಿ
24.	24-11-2005	ಮಾತೃ(ಶುಕ್ರ)ವಾರ	ಬಳ್ಳಾರಿ
25.	25-11-2005	ಶರಣ(ಶನಿ)ವಾರ	ರಾಯಚೂರು
26.	26-11-2005	ದೇವ(ಭಾನು)ವಾರ	ಶಕ್ತಿನಗರ
27.	27-11-2005	ಶಿವ(ಸೋಮ)ವಾರ	ಗಂಗಾವತಿ
28.	28-11-2005	ಬಸವ(ಮಂಗಳ)ವಾರ	ಕೊಪ್ಪಳ
29.	29-11-2006	ಚನ್ನ(ಬುಧ)ವಾರ	,,
30.	30-11-2006	ಪ್ರಭು(ಗುರು)ವಾರ	,,
31.	01-12-2006	ಮಾತೃ(ಶುಕ್ರ)ವಾರ	ಹಾವೇರಿ
32.	02-12-2006	ಶರಣ(ಶನಿ)ವಾರ	ಹುಬ್ಬಳ್ಳಿ
33.	03-12-2006	ದೇವ(ರವಿ)ವಾರ	ಧಾರವಾಡ
34.	04-12-2006	ಸೋಮ(ಶಿವ)ವಾರ	ಸವದತ್ತಿ
35.	05-12-2006	ಬಸವ(ಮಂಗಳ)ವಾರ	ಬೈಲಹೊಂಗಲ
36.	06-12-2006	ಚನ್ನ(ಬುಧ)ವಾರ	ಬೈಲಹೊಂಗಲ
37.	07-12-2006	ಪ್ರಭು(ಗುರು)ವಾರ	ನೇಸರಗಿ
38.	08-12-2006	ಮಾತೃ(ಶುಕ್ರ)ವಾರ	ಬೆಳಗಾವಿ

39.	09-12-2006	ಶರಣ(ಶನಿ)ವಾರ	ಬೆಳಗಾವಿ
40.	10-12-2006	ದೇವ(ರವಿ)ವಾರ	,,
40.	11-12-2006	ಶಿವ(ಸೋಮ)ವಾರ	,,
40.	12-12-2006	ಬಸವ(ಮಂಗಳ)ವಾರ	ಸಂಕೇಶ್ವರ
41.	13-12-2006	ಚನ್ನ(ಬುಧ)ವಾರ	ಗಡಿಹಿಂಗ್ಲಾಜ್
42.	14-12-2006	ಪ್ರಭು(ಗುರು)ವಾರ	ಗಡಿಹಿಂಗ್ಲಾಜ್
43	15-12-2006	ಮಾತೃ(ಶುಕ್ರ)ವಾರ	ಗೋಕಾಕ್
44.	16-12-2006	ಶರಣ(ಶನಿ)ವಾರ	,,
45.	17-12-2006	ದೇವ(ರವಿ)ವಾರ	,,
46.	18-12-2006	ಶಿವ(ಸೋಮ)ವಾರ	,,
47.	19-12-2006	ಬಸವ(ಮಂಗಳ)ವಾರ	ಶೇಗುಣಸಿ
48.	20-12-2006	ಚನ್ನ(ಬುಧ)ವಾರ	ಅಡಹಳ್ಳಿ ಹಟ್ಟಿ
49.	21-12-2006	ಪ್ರಭು(ಗುರು)ವಾರ	ಕನಮಡಿ
50.	22-12-2006	ಮಾತೃ(ಶುಕ್ರ)ವಾರ	ಬಿಜಾಪುರ
51.	23-12-2006	ಶರಣ(ಶನಿ)ವಾರ	ಸಿಂಧಗಿ
52.	24-12-2006	ದೇವ(ರವಿ)ವಾರ	ಗುಲಬರ್ಗಾ
52.	25-12-2006	ಶಿವ(ಸೋಮ)ವಾರ	ಭೀಮರಾಯನಗುಡಿ
53.	26-12-2006	ಬಸವ(ಮಂಗಳ)ವಾರ	ಯಾದಗಿರಿ
54.	27-12-2006	ಚನ್ನ(ಬುಧ)ವಾರ	ಹುಮನಾಬಾದ್
55.	28-12-2006	ಪ್ರಭು(ಗುರು)ವಾರ	ಉದಗೀರ್
56.	29-12-2006	ಮಾತೃ(ಶುಕ್ರ)ವಾರ	ಬೀದರ್
57.	30-12-2006	ಶರಣ(ಶನಿ)ವಾರ	,,
58.	31-12-2006	ದೇವ(ರವಿ)ವಾರ	,,
59.	01-01-2007	ಶಿವ(ಸೋಮ)ವಾರ	ಜಹೀರಾಬಾದ್
60.	02-01-2007	ಬಸವ(ಮಂಗಳ)ವಾರ	ತಾಂಡೂರು
61.	03-01-2007	ಚನ್ನ(ಬುಧ)ವಾರ	ಹೈದ್ರಾಬಾದ್
62.	04-01-2007	ಪ್ರಭು(ಗುರು)ವಾರ	,,
63.	05-01-2007	ಮಾತೃ(ಶುಕ್ರ)ವಾರ	,,
64.	06-01-2007	ಶರಣ(ಶನಿ)ವಾರ	,,
65.	07-01-2007	ದೇವ(ರವಿ)ವಾರ	,,
66.	08-01-2007	ಶಿವ(ಸೋಮ) ವಾರ	,,
67.	09-01-2007	ಬಸವ(ಮಂಗಳ)ವಾರ	,,
68.	10-01-2007	ಚನ್ನ(ಬುಧ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666



ಧರ್ಮಗುರು ಬಸವಣ್ಣ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ತನೆಯ

ಶರಣ ಮೇಳ



ಗಣ ಧ್ವಜ

2007ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮ ಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳು ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು . ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ ಕೂಡಲ ಸಂಗಮದಲ್ಲಿ ಲಿಂಗಾಯತ (ಬಸವ) ಧರ್ಮೀಯರು ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14 ,15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹ ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿ ವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತನೆಯ ಶರಣ ಮೇಳವು 2007ರ ಜನವರಿ 11,12,13,14, ಮತ್ತು 15 ರಂದು ನಡೆಯುವುದು. ಸಾಮೂಹಿಕ ಪಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣ ಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಗ್ಗೆ 10 ರಿಂದ ಧ್ವಜಾರೋಹಣ , ಪಥ ಸಂಚಲನ , ಸಮುದಾಯ ಪಾರ್ಥನೆ ಇರುತ್ತದೆ.(ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.) ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40,30,20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ , ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ ,ಉಪನ್ಯಾಸ, ಧಾರ್ಮಿಕ ರಸ ಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ.11 ಮತ್ತು 12ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ - ಧರ್ಮಗಳಿಗೆ ಸಂಭಂದ ಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶ ವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪಾಲ್ಗೊಳ್ಳಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರು ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ,ಹೊರ ರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10 ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುತ್ತದೆ. ಬೆಳಗಿನ ಉಪಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು.
3. ದಾನಿಗಳು : 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500 ರೂ.
5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ" ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ. ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ , ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಶರಣ ಮೇಳದ (ಜನವರಿ 14 ರಂದು ನಡೆಯುವ ಸಮುದಾಯ ಪಾರ್ಥನೆಯಲ್ಲಿ ಭಾಗಿಯಾಗಿ , ಗಣಲಿಂಗ ದರ್ಶನ ಪಡದು ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗುತ್ತಾನೆ. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

1. ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-23325335/23322790

2. ಪೂಜ್ಯ ಶ್ರೀ ಮಹಾಜಗದ್ಗುರು
ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಬಸವ ಧರ್ಮದ ಮಹಾಜಗದ್ಗುರು ಪೀಠ

ಮಹಾಮನೆ ಮಹಾಮಠ, ಕೂಡಲ ಸಂಗಮ ಸುಕ್ಷೇತ್ರ-587115, ತಾ-ಹುನಗುಂದ,

ಜಿ-ಬಾಗಲಕೋಟೆ

ಬಸವ ಪೀಠವು ಎದ್ದು। ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು। ಧರೆಯವಗೆ
ವಶವಾಗದಿಹುದೆ ಸರ್ವಜ್ಞ ? ||

ಕೂಡಲ ಸಂಗಮ ಸುಕ್ಷೇತ್ರವು ಚಾರಿತ್ರಕ ಹಿನ್ನಲೆಯನೊಳಗೊಂಡ, ಸುಪ್ರಸಿದ್ದ ಸಂಗಮೇಶ್ವರ ದೇವಾಯವನ್ನು ಹೊಂದಿದ್ದು ಧಾರ್ಮಿಕ ಸ್ಥಾನ. ಕೃಷ್ಣಾ -ಮಲಪ್ರಭಾ ನದಿಗಳ ಸಂಗಮದಿಂದಾಗಿ, ಇದೀಗ ಬಸವ ಸಾಗರ ಜಲಾಶಯದ ನಿರ್ಮಾಣದಿಂದಾಗಿ ಪ್ರಾಕೃತಿಕ ಚೆಲುವಿನಿಂದ ಶೋಭಿಸುತ್ತಿರುವ ಸುಂದರ ತಾಣ. ಚಿನ್ನಕ್ಕೆ ಸುವಾಸನೆ ಬಂದಂತೆ ಇಂತಹ ಕ್ಷೇತ್ರದ ಮಹಿಮೆ ವಿಶ್ವವಿಖ್ಯಾತಿಯನ್ನು ಹೊಂದಿರುವುದು ವಿಶ್ವ ಗುರು ಬಸವಣ್ಣನವರ ಪಾದ ಸ್ಪರ್ಶದಿಂದಾಗಿ. ಮಹಾಮಹಿಮ ಸಂಗನ ಬಸವಣ್ಣನು ಪಾದವಿಟ್ಟುದು ಅವಿಮುಕ್ತ ಕ್ಷೇತ್ರ ಎಂದು ಜಗನ್ಮಾತೆ ಅಕ್ಕ ಮಹಾದೇವಿ ನುಡಿದ ಪ್ರಕಾರ ಕೂಡಲ ಸಂಗಮವು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರವಾಗಿ ಇಂದು ಪುಣ್ಯಭೂಮಿಯಾಗಿ ಕಂಗೊಳಿಸುತ್ತಿದೆ.ಮುಸಲ್ಮಾನರಿಗೆ ಮೆಕ್ಕಾ ,ಸಿಖ್ಖರಿಗೆ ಅಮೃತಸರ ,ಬೌದ್ಧರಿಗೆ ಬುದ್ಧಗಯೆ ಮಹತ್ವದ ಧರ್ಮಕ್ಷೇತ್ರಗಳಾದಂತೆ ಬಸವ ಧರ್ಮೀಯರಾದ ಲಿಂಗಾಯತರಿಗೆ ಕೂಡಲ ಸಂಗಮವೇ ಧರ್ಮಕ್ಷೇತ್ರ.

ಇಂತಹ ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೊಳಿಸಬೇಕೆಂಬ ಉದ್ದೇಶದಿಂದ ಶ್ರೀ ಗುರು ಬಸವಣ್ಣನವರ ದಿವ್ಯಪ್ರೇರಣೆಯಂತೆ, ಬಸವ ಧರ್ಮ ಪೀಠ ಎಂಬ ವಿಶ್ವಸ್ಥ ಸಂಸ್ಥೆ (ಟ್ರಸ್ಟ್)ಯೊಂದನ್ನು ಮುಂಬಯಿಯ 1950ನೇ ಟ್ರಸ್ಟ್ ಆಕ್ಟ್ ಪ್ರಕಾರ ನೊಂದಾಯಿಸಲಾಗಿದೆ. ನೋಂದಣಿ ಸಂಖ್ಯೆ : **A 1758 (BJP)**. ಲಿಂ || ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಗೌರವಾಧ್ಯಕ್ಷರಾಗಿ ಸಾಗಿ ಬಂದ ಈ ಟ್ರಸ್ಟಿನ ಕಾರ್ಯಾಧ್ಯಕ್ಷರಾಗಿ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು, ಕೋಶಾಧ್ಯಕ್ಷರಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು, ಸದಸ್ಯರಾಗಿ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಶ್ರೀ ಬಸವ ಕುಮಾರ ಸ್ವಾಮಿಗಳು, ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು, ಶ್ರೀ ಚನ್ನಬಸವಾನಂದ ಸ್ವಾಮೀಜಿ, ಮಾತೆ ಬಸವರತ್ನಾದೇವಿ, ಮಾತೆ ಅಕ್ಕಮಹಾದೇವಿ, ಮಾತೆ ನೀಲಗಂಗಾದೇವಿ, ಮಾತೆ ದಾನೇಶ್ವರಿ, ಮಾತೆ ಕಸ್ತೂರಿದೇವಿ, ಮಾತೆ ಜ್ಞಾನೇಶ್ವರಿ, ಮಾತೆ ಸರ್ವ ಮಂಗಳಾ ದೇವಿ, ಮಾತೆ ನಿಶ್ಚಲಾಂಬ, ಮಾತೆ ಸತ್ಯಾದೇವಿ ಮತ್ತು ಅನೇಕ ತ್ಯಾಗಜೀವಿಗಳು ಹಗಲಿರುಳು ದುಡಿಯುತ್ತಿದ್ದಾರೆ. ಬಸವ ಧರ್ಮ ಪೀಠ ಟ್ರಸ್ಟ್ ಸುಮಾರು ಇಪ್ಪತ್ತಾರು ಎಕರೆ ಜಮೀನನ್ನು ಖರೀದಿಸಿದ್ದು ಇಲ್ಲಿ 'ಮಹಾಮನೆ' ಎಂಬ ಮಹಾಮಠವು ನಿರ್ಮಾಣವಾಗಿದೆ. ಈಗಾಗಲೇ ಚನ್ನಬಸವೇಶ್ವರ ಜ್ಞಾನಮಂಟಪ ಎಂಬ ಪುಸ್ತಕ ಮಳಿಗೆಯ ಕಟ್ಟಡ, ನೀರಿನ ಟ್ಯಾಂಕ್‌ಗಳು ನಿರ್ಮಾಣಗೊಂಡಿದ್ದು 'ಮಹಾಮನೆ' ಎಂಬ ಆಡಳಿತ ಕಟ್ಟಡವು ಪೂರ್ಣಗೊಂಡಿದೆ. 'ಗಣಲಿಂಗ ಮಂಟಪ' ಎಂಬ ಮುಖ್ಯ ಆಲಯ 6 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ದಿ. 14-1-1996 ರಂದು ಸ್ಥಾಪನೆಗೊಂಡ ಗಣಲಿಂಗವು ವಿಶೇಷ ಶಕ್ತಿ ಕೇಂದ್ರವಾಗಿ

ದರ್ಶನಕ್ಕೆ ಲಭ್ಯವಿದೆ. ಬಸವ ಧ್ಯಾನ ಮಂಟಪವು 8 ಲಕ್ಷ ರೂ.ಗಳ ವೆಚ್ಚದಲ್ಲಿ ಸಿದ್ಧವಾಗಿದ್ದು ಗುರು ಬಸವಣ್ಣನವರ ದಿವ್ಯ ಮೂರ್ತಿಯನ್ನು ಹೊಂದಿದೆ. ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಅಧಿಕಾರಿಗಳಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಶರಣಾಲಯ (ಗದ್ದುಗೆಯು) ಕಮಲದಾಕೃತಿಯಲ್ಲಿ ರೂಪುಗೊಂಡಿದೆ. 20 ಶರಣರ ಮಂಟಪಗಳು, ಭವ್ಯ ಮತ್ತು ದಿವ್ಯವಾಗಿದೆ. ಜೀವನದಲ್ಲಿ ಯಾವುದೇ ಶುಭ ಪ್ರಸಂಗ, ಮದುವೆ, ನೌಕರಿ ಪ್ರಾಪ್ತಿ, ಮಗುವಿನ ಜನನ, ಗೃಹ ಪ್ರವೇಶ, ಉದ್ಯಮ ಪ್ರಾರಂಭ ಇತ್ಯಾದಿ ನಡೆದಾಗ ತಪ್ಪದೆ ಬಂದು ಬಸವ ಮಹಾಮಂಟಪದಲ್ಲಿ ಸ್ವತಃ ಪೂಜೆ ಸಲ್ಲಿಸಿ, ದಾಸೋಹ ಮಾಡಿಸಿ ಕಾಣಿಕೆ ನೀಡಿ ಧರ್ಮಗುರುವಿಗೆ ಕೃತಜ್ಞತೆ ತೋರಿಸಿರಿ.

ಸದ್ಭಕ್ತರಿಗೆ ದೊರಕುವ ಸೌಲಭ್ಯಗಳು

ಕೂಡಲ ಸಂಗಮ ಸುಕ್ಷೇತ್ರವನ್ನು, ಮಹಾಮನೆ ಮಹಾಮಠವನ್ನು ಸಂದರ್ಶಿಸುವ ಯಾತ್ರಾರ್ಥಿಗಳಿಗೆ ದಾಸೋಹದ ವ್ಯವಸ್ಥೆ ಇರುತ್ತದೆ. ಬೆಳಿಗ್ಗೆ 10 ಗಂಟೆಯಿಂದ 11-30 ರವರೆಗೆ ಉಪಾಹಾರವನ್ನು, ಮಧ್ಯಾಹ್ನ 12 ರಿಂದ 4ರವರೆಗೆ ಊಟವನ್ನು ಕೊಡಲಾಗುವುದು. 50 ಕೋಣೆಗಳ "ಅಕ್ಕನಾಗಲಾಂಬಿಕಾ ಶರಣ ಧಾಮ" ಮತ್ತು 80 ಕೋಣೆಗಳ "ಸರ್ವಜ್ಞ ಶರಣ ಧಾಮ" ಮತ್ತು "ಸಿದ್ದರಾಮೇಶ್ವರ ವಸತಿ ಸಮುಚ್ಚಯ" ಸಿದ್ಧವಾಗಿರುವುದರಿಂದ ವಸತಿಯ ಸೌಲಭ್ಯವು ಯಾತ್ರಾರ್ಥಿಗಳಿಗೆ ಲಭ್ಯವಾಗುತ್ತದೆ. ಪ್ರತ್ಯೇಕವಾದ ಸಾರ್ವಜನಿಕ ಶೌಚಾಲಯ ಮತ್ತು ಸ್ನಾನ ಗೃಹಗಳೂ ಸಿದ್ಧವಾಗಿವೆ. ಶಾಲೆ-ಕಾಲೇಜುಗಳ ಪ್ರವಾಸಿ ತಂಡದವರು ಮತ್ತು ಇನ್ನಿತರ ಪ್ರವಾಸಿ ತಂಡದವರಿಗೆ ಪೂರ್ವಭಾವಿ ಬೇಡಿಕೆಯೊಡನೆ ಉಪಾಹಾರ-ಊಟಗಳನ್ನು ಸಿದ್ಧಪಡಿಸಿ ಕೊಡಲಾಗುವುದು. ವಿವಾಹ ಕಾರ್ಯಕ್ಕೆ ದೊಡ್ಡ ಸಭಾ ಭವನ, ವಾಸ್ತವ್ಯಕ್ಕೆ ಕೋಣೆಗಳು, ಪಾತ್ರೆ ಮುಂತಾದ ಸೌಕರ್ಯಗಳು ಲಭ್ಯವಿರುವುದರಿಂದ ಮದುವೆಗಳನ್ನು ಮಾಡುವುದಕ್ಕೂ ಸೂಕ್ತ ಅನುಕೂಲತೆಗಳಿವೆ.

ಧನ ಸಹಾಯಕ್ಕೆ ಮನವಿ

ಕೂಡಲ ಸಂಗಮ ಕ್ಷೇತ್ರದರ್ಶನಕ್ಕೆ ಬಂದವರಿಗೆ ವಸತಿ-ಊಟಗಳ ಸೌಲಭ್ಯ ಇಲ್ಲದ್ದನ್ನು ಗಮನಿಸಿ ಬಸವ ಧರ್ಮ ಪೀಠ ಟ್ರಸ್ಟ್ ರಚಿಸಿ ಹಲವಾರು ಕಾರ್ಯಗಳನ್ನು ಮಾಡಲಾಗುತ್ತಿದೆ. ಶರಣರ ಮಂಟಪಗಳನ್ನು ವಿಸ್ತರಿಸಲಾಗುತ್ತಿದೆ. ಸಾಮೂಹಿಕ ವಸತಿ ಗೃಹ "ಸಿದ್ದರಾಮೇಶ್ವರ ಶರಣ ಧಾಮ"ದ ನಿರ್ಮಾಣ ಪೂರೈಸುತ್ತಿದೆ. ಬಸವಾಲಯ ಎಂಬ ಪೂಜಾ ಮಂದಿರವನ್ನು ಮತ್ತು ಪ್ರವಚನ ಮಂದಿರವೊಂದನ್ನು ನಿರ್ಮಿಸಲಾಗುತ್ತಿದೆ. ಇವೆಲ್ಲವುಗಳ ನಿರ್ಮಾಣಕ್ಕೆ ಹಣದ ಅವಶ್ಯಕತೆ ಬಹಳವಿದೆ. 1. ಹೆಚ್ಚಿನ ಪ್ರಮಾಣದಲ್ಲಿ ಅಂದರೆ 1 ಲಕ್ಷ ರೂ.ಗಳ ಮೇಲೆ ಧನ ಸಹಾಯ ಮಾಡುವವರ ಹೆಸರಿನಲ್ಲಿ ಪ್ರವಾಸಿ ಧಾಮದ ಬೇರೆ ಬೇರೆ ಬ್ಲಾಕುಗಳನ್ನು ಕಟ್ಟಿಸಲಾಗುತ್ತದೆ. 2. ಡಬ್ಬಲ್ ಕೋಣೆ (ಶೌಚಾಲಯ-ಸ್ನಾನಗೃಹಗಳೊಡನೆ)ಗೆ ರೂ. 81,000/- 3. ಸಿಂಗಲ್ ಕೋಣೆ (ಶೌಚಾಲಯ-ಸ್ನಾನಗೃಹಗಳೊಡನೆ)ಗೆ ರೂ. 61,000/- ಈ ರೀತಿ ಕೊಟ್ಟವರ ಹೆಸರುಗಳನ್ನು ಕೆತ್ತಿಸಿ ಆಯಾ ಕೋಣೆಗಳ ಮುಂದೆ ಶಿಲಾಫಲಕಗಳನ್ನು ಹಾಕಲಾಗುವುದು. ದಾಸೋಹ ನಿಧಿಗೆ ರೂ. 1111/- ಮತ್ತು ರೂ. 501/- ಕೊಟ್ಟರೆ ಆ ಹಣವನ್ನು ಪುದುವಟ್ಟಾಗಿ (F.D.) ಇಟ್ಟು ಅದರ ಬಡ್ಡಿಯಲ್ಲಿ ನಿತ್ಯ ದಾಸೋಹವನ್ನು ಮತ್ತು ನಿತ್ಯ ಪೂಜೆಯನ್ನು ನಡೆಸಲಾಗುವುದು. ಶರಣ ಮೇಳ ಉತ್ಸವ ನಿರ್ವಹಣೆಗೆ ನಿಧಿಯೊಂದನ್ನು ರಚಿಸುತ್ತಿದ್ದು ಕನಿಷ್ಠ 5000/- ರೂ.ಗಳಿಂದ ಮೇಲೆ ನಿಧಿಗೆ ಕೊಟ್ಟು ಅದರ ಬಡ್ಡಿಯನ್ನು ಶರಣ ಮೇಳ ನಿರ್ವಹಣೆಗೆ ಬಳಸಲು ದಾನಿಗಳು ಸೂಚಿಸಬಹುದು.

ಬಸವ ಪುತ್ಥಳಿ ನಿರ್ಮಾಣ ಯೋಜನೆ

108 ಅಡಿ ಎತ್ತರದ ಬೃಹತ್ ಬಸವ ಪುತ್ಥಳಿಯನ್ನು ಬಸವ ಕಲ್ಯಾಣದಲ್ಲಿರುವ ಶರಣ ಶೈಲದ ಮೇಲೆ ನಿರ್ಮಿಸುತ್ತಿದ್ದು ಇದಕ್ಕೆ ಒಂದೂವರೆ ಕೋಟಿ ರೂ.ಗಳ ಖರ್ಚು ಬರಲಿದೆ. ಅವರವರ ಭಕ್ತಿ ಮತ್ತು

ಶಕ್ತ್ಯಾನುಸಾರ ಎಷ್ಟೇ ಕೊಡಬಹುದಾದರೂ 11,000 ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಗೌರವ ಫಲಕದಲ್ಲಿ ಬರೆಸಲಾಗುವುದು. 25,000 ಮತ್ತು 50,000 ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದು. ಒಂದು ಲಕ್ಷ ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದಲ್ಲದೆ ಅವರ ಭಾವಚಿತ್ರವನ್ನು ಸಹ ಶರಣ ದರ್ಶನ-ಮ್ಯೂಸಿಯಮ್‌ದಲ್ಲಿ ಪ್ರದರ್ಶಿಸಲಾಗುವುದು. ಧರ್ಮಗುರುವಿಗೆ ನಿರ್ಮಿಸಲಾಗುತ್ತಿರುವ ಈ ಸ್ಮಾರಕಕ್ಕೆ ಎಲ್ಲರೂ ಉದಾರವಾಗಿ ಕಾಣಿಕೆ ನೀಡಬೇಕೆಂದು ಕೋರುತ್ತೇವೆ.

ಬೆಂಗಳೂರು ಶಾಖೆಯ ವಿಳಾಸ : ಬಸವ ಧರ್ಮ ಪೀಠ, ಬಸವ ಮಂಟಪ,
2035, 20ನೇ ಮುಖ್ಯ ರಸ್ತೆ 2ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-10.
ದೂ: 23325335/23322790. ಫ್ಯಾಕ್ಸ್ : 22923736.

ಬೃಹತ್ ಪುತ್ಥಳಿಯ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ನಡೆಯಲಿರುವುದರಿಂದ ಸಹೃದಯವಂತ ಧರ್ಮಾನುಯಾಯಿಗಳು ತನು, ಮನ, ಧನಗಳಿಂದ ಉದಾರವಾದ ಧನ ಸಹಾಯ ಮಾಡಲು ಮುಂದೆ ಬರುವಿರಾಗಿ ನಂಬುತ್ತೇವೆ.

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ (ರಿ.)

ವಚನ ಕಿರಣ

1.ದೇಹ ಕೊಟ್ಟ ದೇವನಿಗೆ ವಂದಿಸಲೋ
ದೇಹ ದೇವಾಲಯವ ಮಾಡಿದ ಗುರು ಬಸವ
ತಂದೆಗೆ ವಂದಿಸಲೊ
ದೇವಾಲಯದಿ ಲಿಂಗದೇವನೆಂಬ ಚಿನ್ಮಯನ
ಅನುಗೊಳಿಸಿದ ಮಾತಾಜಿಗೆ ವಂದಿಸಲೊ ತಿಳಿಯದೆ
ಮನ ಮೂಕವಾಗಿದೆ ಪರಮ ಪ್ರಭು ಬಸವೇಶ

2. ಕಂಗಳಲಿ ಬಸವ ಗುರು ತುಂಬಿರಲಿ
ಕಿವಿಯಲ್ಲಿ ಓಂಕಾರ ಝೇಂಕಾರವಿರಲಿ
ಮನದಲ್ಲಿ ವಚನದ ಹೂರಣ ತುಂಬಿರಲಿ
ಬುದ್ಧಿಯಲಿ ಮಾತಾಜಿಯ ಕಾರ್ಯಯೋಜನೆಯ ಅರಿವಿರಲಿ
ಧರ್ಮದ ಸೇವೆಗಾಗಿ ಕರಗಳ ಕಾತರಿಸುತ್ತಿರಲಿ
ಉಸಿರು ದೇವನೊಡನೆ ಬೆರೆತಿರಲಿ
ಹೃದಯದ ಬಡಿತ ಬಸವ ಸ್ಮರಣೆಯ ಮಿಡಿತದಿಂ ತುಂಬಿರಲಿ
ಈ ದೇಹರಥ ದೇವ ರಥವಾಗಿರಲಿ
ಲಿಂಗದೇವನೆಂಬ ದೇವರು ರಾರಾಜಿಸಲಿ
ಪರಮ ಪ್ರಭು ಬಸವೇಶಾ.

-ಗಂಗಾಬಿಕಾ ಬಸವರಾಜು

ನಗೆಯು ಬರುತಿದೆ

-ಮಾತಾಜಿ

ಈ ಪದಪುಂಜ ಕನ್ನಡದಲ್ಲಿ ಬಹಳ ಜನಪ್ರಿಯ. ದಾಸವರೇಣ್ಯರು, "ನಗೆಯು ಬರುತಿದೆ, ಎನಗೆ ನಗೆಯು ಬರುತಿದೆ. ಜಗದ ಜನರುಮಾಡುವಂತಹ ಹಗರಣವ ಕಂಡು ಎನಗೆ ನಗೆಯು ಬರುತಿದೆ." ಎಂದು ಲೋಕದ ಜನರ ನಡೆ-ನುಡಿ ಕಂಡು ವಿಡಂಬಿಸುತ್ತಾರೆ.

ಒಂದು ದಿನ ಓರ್ವ ಮಹಿಳೆ ತನ್ನ ಮಗಳು ಮತ್ತು ಆಕೆಯ ಸ್ನೇಹಿತೆಯೊಡಗೂಡಿ ಬಂದು ಬೆಂಗಳೂರಿನ ಬಸವ ಮಂಟಪದಲ್ಲಿ ಒಂದು ರಾತ್ರಿ ತಂಗಲು ವಿನಂತಿಸಿಕೊಂಡರು. ಆ ಹುಡುಗಿಯರಿಬ್ಬರೂ ಎಂ.ಬಿ.ಬಿ.ಎಸ್ ಮುಗಿಸಿ ಮುಂದಿನ ಸ್ನಾತಕೋತ್ತರ ವೈದ್ಯಕೀಯ ಅಧ್ಯಯನಕ್ಕಾಗಿ ಪ್ರವೇಶ ಪರೀಕ್ಷೆ ಬರೆಯುವವರಿದ್ದರು. ತಾಯಿ ಬಹಳ ಪ್ರೌಢಳಂತೆ ಕಂಡಳು; ತಾನು ಅವಿದ್ಯಾವಂತಳಾದರೂ (3ನೆಯ ತರಗತಿವರೆಗೆ ಮಾತ್ರ ಓದಿದ್ದು) ಕೆಲವೊಂದು ತತ್ತ್ವದ ಪದಗಳನ್ನು ಪ್ರಾಸಬದ್ಧವಾಗಿ ಬರೆದಿದ್ದಳು. ಆದರಲ್ಲಿ ಮುಖ್ಯವಾಗಿ ಸಂಸಾರ ಹೇಯಸ್ಥಲದ ಅಳಲು ತುಂಬಿತ್ತು. ತಾನು ಏಕಾದರೂ ಸಂಸಾರದ ಕೆಸರಲ್ಲಿ ಬಿದ್ದೆನೋ, ತನ್ನ ವ್ಯಕ್ತಿತ್ವವು ಬೆಳೆಯಲಿಲ್ಲ, ಒಳಗಿರುವ ಕವಯಿತ್ರಿ ಅರಳಲಿಲ್ಲ, ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದ್ದಷ್ಟೆ ಸಮಾಧಾನ ಎಂದು ಬಗೆಬಗೆಯಾಗಿ ವಿವರಿಸಿ ಸಮಯವನ್ನು ತಿಂದರು. ಶರಣ ಮೇಳಕ್ಕೆ ತಪ್ಪದೆ ಬರುತ್ತೇನೆ. ನಿಮ್ಮನ್ನು ಆ ಜನಸಂದಣಿಯ ಮಧ್ಯೆ ಕಾಣಲಾಗಿಲ್ಲ, ಮೊದಲೇ ಈ ದಾರಿ(ವೈರಾಗ್ಯ) ತಿಳಿದಿದ್ದರೆ ? ಎಂದು ಪರಿತಪಿಸಿದರು.

ನಂತರ ಕೆಲವೇ ನಿಮಿಷಗಳಲ್ಲಿ ನಮ್ಮ ಮಗಳು ಎಂ.ಬಿ.ಬಿ. ಎಸ್ ಮುಗಿಸಿದ್ದಾಳೆ. ಆಕೆಗೆ ಒಳ್ಳೆಯ ವರನನ್ನು ನೋಡಿಕೊಡಿರಿ ಎಂದಾಗ ನಾನು ಸುಸ್ತೋ ಸುಸ್ತು. ಮತ್ತೆ ಸಂಸಾರದಲ್ಲಿ ಅಷ್ಟೊಂದು ಪಡಿಪಾಟಲು ಪಟ್ಟವಳು ಮಗಳ ಮದುವೆಯ ಚಿಂತೆ ಏಕೆ ಮಾಡಬೇಕು? ವೈರಾಗ್ಯದ ಮಾರ್ಗದಲ್ಲಿ ಸಾಗಿ ಸಮಾಜ ಸೇವೆ ಮಾಡು ಎಂದು ಹೇಳಬಹುದಲ್ಲ!

ಆಗ ನನಗೆ ಅನ್ನಿಸಿತು. ಕೆಲವರು ಯಾಂತ್ರಿಕವಾಗಿ ಕೆಲವು ಮಾತುಗಳನ್ನು ಆಡುತ್ತಾರೆ; ಯಾಂತ್ರಿಕವಾಗಿ ಬರೆಯುತ್ತಾರೆ. ಅವರ ಮನದಲ್ಲಿ ಯಾವ ಆದರ್ಶವೂ ಬೇರು ಬಿಟ್ಟಿರುವುದಿಲ್ಲ. ಇನ್ನು ಇಂಥವರ ಜೊತೆ ಮಾತನಾಡಿ ಸಮಯ ಕಳೆಯಬಾರದು ಎಂದು ನಾನು ಎದ್ದು ಬಂದೆ.

ಆಚಾರ ಸಂಪನ್ನ ?

ಓರ್ವ ವ್ಯಕ್ತಿ ಬಂದರು. ಹುಟ್ಟಿನಿಂದ ಹರಳಯ್ಯ ಸಮಾಜದವರು 1974-75ರಲ್ಲಿ ಇಡೀ ಪರಿವಾರವೇ ಇಷ್ಟಲಿಂಗ ದೀಕ್ಷೆ ಪಡೆದುದಷ್ಟೇ ಅಲ್ಲ ಅಷ್ಟೇ ಆಚಾರ ಸಂಪನ್ನರಾಗಿ ಹುಟ್ಟು ಲಿಂಗಾಯತರಿಂದ ಗೌರವ ಪಡೆದುದೇ ಅಲ್ಲದೆ ಸಂಪ್ರದಾಯವಾದಿ ಲಿಂಗಾಯತರು ಅರ್ಥಾತ್ ವೀರಶೈವರು ಸಹ ಇವರನ್ನು ಪೂಜೆಗೆ ಕರೆಯುವಂತಹ ಪ್ರಭಾವ ಬೆಳೆಸಿಕೊಂಡರು. ಇವರಿಗೆ ಬಹಳ ಹೆಮ್ಮೆ. ನಾವು ಜಾತಿ ಲಿಂಗಾಯತರಿಗಿಂತಲೂ ಆಚಾರವಂತರಾಗಿ ಇದ್ದೇವೆ ಎಂದು. ನನಗೂ ಸಂತೋಷ. ನವ ದೀಕ್ಷಿತರು ಇಷ್ಟು ಚೆನ್ನಾಗಿ ಇದ್ದಾರೆ ಎಂದು.

ಒಮ್ಮೆ ಓರ್ವ ವೀರಶೈವರು ಗಣಪತಿ ಹಬ್ಬದಲ್ಲಿ ಒಂದು ಸಮಸ್ಯೆ ಇವರ ಮುಂದಿಟ್ಟರು. "ಇವತ್ತು ಗಣಪತಿ ಕೂರಿಸಬೇಕು. ಏನು ಮಾಡುವುದು ? ನನ್ನ ಹೆಂಡತಿ ಇಂದು ಹೊರಗೆ (ಮುಟ್ಟು) ಆಗಿದ್ದಾಳೆ" ಅವರಿಗೆ ಆಗ ಬಹಳ ಅದ್ಭುತವಾದ ಸಲಹೆ ಕೊಟ್ಟೆ ಎಂದು ಇವರು ನನ್ನ ಮುಂದೆ ಹೆಮ್ಮೆಯಿಂದ ಹೇಳಿದರು. ಏನದು ಎಂದು ನಾನು ಕೇಳಿದಾಗ ಅವರ ವಿವರಣೆ ಹೀಗಿತ್ತು;

ಕುಡಿಯುತ್ತಿಲ್ಲ. ಆಕೆ ನೀಡಿದ ಊಟ ಮಾಡುವುದಿಲ್ಲ. ಆದ್ದರಿಂದ ಬೇಗನೆ ದೀಕ್ಷೆ ಮಾಡಿಸಬೇಕಾಗಿದೆ." ಆಗಲಿ, ಕರೆದುಕೊಂಡು ಬನ್ನಿರಿ. ನಾಳೆ ಬೆಳಿಗ್ಗೆ ಬಂದರೆ ದೀಕ್ಷೆ ಮಾಡುತ್ತೇನೆ" ಎಂದೆ.

"ಇಲ್ಲ...ಇಲ್ಲ; ನಾಳೆ ಮಂಗಳವಾರ ಅಮಂಗಳ, ಬುಧವಾರ ಕರೆತರುತ್ತೇನೆ." ನಾನು ಮತ್ತೊಮ್ಮೆ ಬೆಚ್ಚಿ ಬಿದ್ದೆ. ಹಿಂದಿನ ದಿನ ನಾನೆ ಶೂನ್ಯ ಸಂಪಾದನೆ ವಿವರಿಸುತ್ತ ಧರ್ಮಪಿತರ ಈ ವಚನಕ್ಕೆ ಅರ್ಥವನ್ನು ಹೇಳಿದ್ದೆ.

ಜಂಗಮವೆ ಜ್ಞಾನರೂಪು
ಭಕ್ತನೆ ಆಚಾರ ರೂಪೆಂಬುದು ತಪ್ಪದು ನೋಡಯ್ಯ!
ನಾನು ನಿಮ್ಮಲ್ಲಿ ಆಚಾರಿಯಾದಡೇನಯ್ಯಾ ಜ್ಞಾನವಿಲ್ಲದನ್ನಕ್ಕರ
ತಲೆಯಿಲ್ಲದ ಮುಂಡದಂತೆ...........
ಜ್ಞಾನದಿಂದ ಆಚಾರ, ಜ್ಞಾನದಿಂದ ಅನುಭಾವ, ಜ್ಞಾನದಿಂದ ಪ್ರಸಾದವಲ್ಲದೆ
ಜ್ಞಾನವನ್ನುಳಿದು ತೋರುವ ಘನವ ಕಾಣೆನು.

-ಧರ್ಮಪಿತ ಬಸವಣ್ಣನವರು

ನಾನು ಪ್ರಸ್ತಾಪಿಸುತ್ತಿರುವ ಈ ಶರಣರೇ ಅಲ್ಲದೆ ಬಹುಪಾಲು ಜನರು ಸರಿಯಾದ ಜ್ಞಾನವಿಲ್ಲದೆ ವೈದಿಕ (ಬ್ರಾಹ್ಮಣ) ಹಿಂದು ಧರ್ಮ ಸೃಷ್ಟಿಸಿರುವ ಮೂಢ ನಂಬಿಕೆಯ ಕೆಸರಿನ ಗುಂಡಿಯಲ್ಲಿ ಸಿಕ್ಕಿಬಿದ್ದಿದ್ದು ಮಾನಸಿಕವಾಗಿ, ಬೌದ್ಧಿಕವಾಗಿ ಹೊರಬರದ ನಿಸ್ಸಹಾಯಕ ಸ್ಥಿತಿಯಲ್ಲಿದ್ದಾರೆ.

- -

ಕಲ್ಯಾಣ ಕಿರಣ ತಲುಪವಲ್ಲಿ ಅಸ್ತವ್ಯಸ್ಥತೆ

ಕೆಲವೊಂದು ತಾಂತ್ರಿಕ ಕಾರಣಗಳಿಂದಾಗಿ ಕಲ್ಯಾಣ ಕಿರಣ ಮಾಸಪತ್ರಿಕೆ ಓದುಗರಿಗೆ ಸರಿಯಾಗಿ ತಲುಪುತ್ತಿಲ್ಲ. ವಿಳಾಸಗಳನ್ನು ಸರಿ ಪಡಿಸುವ ಕೆಲಸ ನಡೆಯುತ್ತಿದೆ. ಆದ್ದರಿಂದ ಶರಣ ಬಂಧುಗಳು ಪತ್ರಿಕೆಯು ಬೇರೆಯವರ ಮನೆಗೆ ತಲುಪಿ, ತಮ್ಮ ಮನೆಗೆ ಬಂದಿಲ್ಲದಿದ್ದರೆ ಒಂದು ಪತ್ರ ಬರೆದು ತಿಳಿಸಬೇಕಾಗಿ ನಮ್ರ ವಿನಂತಿ. ಬಹುಶಃ ಪತ್ರಿಕೆ ಮುದ್ರಣಗೊಂಡಿರಲಿಕ್ಕಿಲ್ಲ ಎಂದು ಸುಮ್ಮನಿದ್ದು ಬಿಡುವ ಸಂಭವವಿದೆ. ಅವರ ಮನೆಗೆ ತಲುಪಿಸವರು ತಮ್ಮ ಪರಿಚಿತ ಶರಣ ಬಂಧುಗಳಲ್ಲಿ ಅವರಿಗೆ ಬಂದಿದೆಯೋ ಇಲ್ಲವೋ ಎಂದು ಕೇಳಿರಿ. ದೂರವಾಣಿ ಮೂಲಕ ಮತ್ತು ನಮ್ಮ ಸಂಸ್ಥೆಯ ಯಾರಾದರೂ ಭೇಟಿಯಾದಾಗ ಅವರಿಗೆ ತಿಳಿಸುವ ಮೂಲಕ ಕೆಲಸವಾಯಿತೆಂದು ಭಾವಿಸಬಾರದು. ಅವರು ಬೇರೆ ಕಡೆ ಪ್ರವಾಸಕ್ಕೆ ಹೊರಟು ನಿಮ್ಮ ವಿಷಯ ಮರೆಯಬಹುದು. ಪತ್ರಿಕೆ ಬರದೆ ಇದ್ದರೆ ಒಂದು ಪೋಸ್ಟ್ ಕಾರ್ಡ್ ಬರೆದು ಬೆಂಗಳೂರಿನ ಬಸವ ಮಂಟಪಕ್ಕೆ ಕಳಿಸಿರಿ. ನಿಮ್ಮ ಪತ್ರದಲ್ಲಿ ಮರೆಯದೆ ನಿಮ್ಮ ಪೂರ್ತಿ ವಿಳಾಸವನ್ನು ಕೊಡಿರಿ. ಕೆಲವರು ತಮಗೆ ಪತ್ರಿಕೆ ಬರಲಿಲ್ಲವೆಂದು ಕೋಪದಿಂದ ಪತ್ರ ಬರೆದಿರುತ್ತಾರೆ. ಆದರೆ ಪತ್ರದಲ್ಲಿ ವಿಳಾಸವನ್ನೇ ಬರೆದಿರುವುದಿಲ್ಲ. ಆಗ ವ್ಯವಹರಿಸುವವರು ಹೇಗೆ ವ್ಯವಹರಿಸಲು ಸಾಧ್ಯ? ಆದ್ದರಿಂದ ಪತ್ರದಲ್ಲಿ ನಿಮ್ಮ ಕ್ರಮ ಸಂಖ್ಯೆ ಮತ್ತು ಪೂರ್ಣ ವಿಳಾಸ ಇರಲಿ.

-ವ್ಯವಸ್ಥಾಪಕರು, ಕಲ್ಯಾಣ ಕಿರಣ

ವಿಸ್ತಾರಗೊಂಡ
ಬಸವ ಗಂಗೋತ್ರಿ ನಗರ ಯೋಜನೆ - 2ನೇ ಹಂತ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು - ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ "ಬಸವ ಗಂಗೋತ್ರಿ" ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ "ಆರೋವಿಲ್ಲೆ" ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿ ದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಗೆ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. "ಬಸವ ಗಂಗೋತ್ರಿ ನಗರ" 2ನೆಯ ಹಂತದ ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟ್ ಒಡೆತನದಲ್ಲಿ ರೂಪುಗೊಂಡಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ' - 40' X 60' - ವಿಸ್ತೀರ್ಣ 2400 ಚ.ಅಡಿಗಳು
ವರ್ಗ 'ಬಿ' - 40' X 40' - ವಿಸ್ತೀರ್ಣ 1600 ಚ.ಅಡಿಗಳು
ವರ್ಗ 'ಸಿ' - 30' X 40' - ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

1. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 3000-00 (ಮೂರು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್, ಬೆಂಗಳೂರು" ಹೆಸರಿಗೆ 250-00(ಎರಡು ನೂರ ಐವತ್ತು) ರೂಗಳನ್ನು ಎಂ.ಓ / ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. 2ನೆಯ ಹಂತದ ನಿವೇಶನ ವಿತರಣಾ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ : ದೂ : 080 - 23325335 / 23322790

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು,
ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಬಸವ ಮಂಟಪ
2035, 20ನೆಯ ಮೇನ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560010

ಬಸವ ಗಂಗೋತ್ರಿ ವಿಶೇಷ ವಿವರಗಳು

★ ಬೆಂಗಳೂರು - ಮೈಸೂರು ನಗರಗಳ ಚತುಷ್ಪಥ ಹೆದ್ದಾರಿಗೆ ಹೊಂದಿಕೊಂಡಿದೆ.

★ ರಾಜರಾಜೇಶ್ವರಿ ಡೆಂಟಲ್ ಕಾಲೇಜು, ಡಾನ್ ಬಾಸ್ಕೋ ಎಂಜಿನಿಯರಿಂಗ್ ಕಾಲೇಜ್ ಮುಂತಾದ ಸಂಸ್ಥೆಗಳ ಸಮೀಪದಲ್ಲಿದೆ.


★ ಬೆಂಗಳೂರು ನಗರದಿಂದ ಸಾರಿಗೆ ವ್ಯವಸ್ಥೆಯ ಅನುಕೂಲವಿದೆ. ಹೀಗಾಗಿ ನಗರದಲ್ಲಿ ಉದ್ಯೋಗಿಗಳಾಗಿರುವವರಿಗೆ ಹೋಗಿ ಬರಲು ಅನುಕೂಲತೆ ಇದೆ.

★ ಮೊದಲನೆಯ ಹಂತದಲ್ಲಿ ರೂಪಿಸಿದ ನಿವೇಶನಗಳು ಮಾರಾಟವಾಗಿದ್ದು ಜನರ ಬೇಡಿಕೆ ಬಹಳವಾಗಿರುವುದರಿಂದ ಎರಡನೆಯ ಹಂತದಲ್ಲಿ ಎರಡನೆಯ ಹಂತದ ಯೋಜನೆ ಪ್ರಾರಂಭಿಸಲಾಗಿದೆ.

ಬಸವ ಗಂಗೋತ್ರಿ ಸ್ಥಳ ನಿರ್ದೇಶನ


ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್(ರಿ.) ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು - ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ 21 ಕಿ.ಮೀ.ಬಳಿ ಇದ್ದು, ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು 231, 227, 228, 229, 226ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ಪ್ರವೇಶ ದ್ವಾರವಿದೆ.



ವಿಶ್ವಧರ್ಮ ಪ್ರವಚನ, ಯಾದಗೀರ್‌ದಲ್ಲಿ ಉದ್ಘಾಟನಾ ಸಮಾರಂಭದಲ್ಲಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಮತ್ತು ಯಾದಗೀರನ ಗಣ್ಯವ್ಯಕ್ತಿಗಳು

CPMG/KA/BGW - 50/2006-2008 WPP(W) - 17 R. No. 19980/70



ಯಾದಗೀರ್ ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮತ್ತು
ಪೂಜ್ಯ ಶ್ರೀ ಮಾತೆ ಗಂಗಾದೇವಿಯವರ ಭವ್ಯ ಮೆರವಣಿಗೆ
ಎಡದಿಂದ ಬಲಕ್ಕೆ ತಿಪ್ಪಾರೆಡ್ಡಿ ಮಾದ್ಯಾರ, ಡಾ|| ಎನ್. ಜಿ. ವಾರದ, ಚಂದ್ರಕಾಂತ್ ಮೋದಿ, ಇಂದುದರ ಸಿನ್ನೂರ